First Canarese Instructor
10. ed.
1880

Pri

FIRST

CANARESE INSTRUCTOR

TENTH EDITION

ಬಾಲಶಿಕ್ಷೆಯು

MANGALORE
BASEL MISSION BOOK & TRACT DEPOSITORY
1880

Price: 1 A. 6 Pie.] 36th Thousand [ಕ್ರಯ: ೧ ಆಣೆ ೬ ಪೈ.

[Gottfried Hartmann Weigle]

1

FIRST

CANARESE INSTRUCTOR

ಬಾಲಶಿಕ್ಷೆಯು



Tenth Edition

MANGALORE


BASEL MISSION BOOK & TRACT DEPOSITORY
1880

2

BASEL MISSION PRESS

CRESCE FLORESCE FRUCTUESCE

MANGALORE



ഋ ൠ

ഃ

ഌ ൡ

ം

ൢ ൣ



ಅಕ್ಷರಮಾಲೆಯು.

ಸ್ವರಗಳು.

ಅ　ಆ　ಇ　ಈ

ಉ　ಊ　ಋ　ಎ

ಏ　ಐ　ಒ　ಓ

ಔ　ಅಂ　ಅಃ

ವ್ಯಂಜನಗಳು.

ಕ	ಖ	ಗ	ಘ	ಙ	
ಚ	ಛ	ಜ	ಝ	ಞ	
ಟ	ಠ	ಡ	ಢ	ಣ	
ತ	ಥ	ದ	ಧ	ನ	
ಪ	ಫ	ಬ	ಭ	ಮ	
ಯ	ರ	ಲ	ವ		
ಶ	ಷ	ಸ	ಹ	ಳ	ಕ್ಷ

ಸಮರೂಪವಾದ ಅಕ್ಷರಗಳು.

◡ ಅ ಆ ಲ ಉ ಊ

ಒ ಒ ಓ ಔ ಜ ಜ ಚ ಬ

ಉ ಪ ಷ ಹ ಘ ಫ

ಎ ಎ ಏ ವ ಮ

⌒ ಐ ಞ ಞಾ ಣ

◡ ಠ ರ ಯ ಝ

ಬ ದ ಡ ಧ ಢ ಥ ಛ ಟ

∩ ಗ ನ ಸ ಳ

∪ ಕ ಕ್ಷ ತ ಶ

೨ ಖ ಋ ಱ

ಬೇರೆ ಬೇರೆ ವರ್ಣಗಳು ಹುಟ್ಟುವ ಸ್ಥಾನಗಳು.

---

೧) ಕಂಠದಲ್ಲಿ ಹುಟ್ಟುವ ವರ್ಣಗಳು:

ಅ ಆ ಕ ಖ ಗ ಘ ಙ ಹ

---

೨) ತಾಲುವಲ್ಲಿ ಹುಟ್ಟುವ ವರ್ಣಗಳು:

ಇ ಈ ಚ ಛ ಜ ಝ ಞ ಯ ಶ

---

೩) ಮೂರ್ಧದಲ್ಲಿ ಹುಟ್ಟುವ ವರ್ಣಗಳು:

ಋ ೠ ಟ ಠ ಡ ಢ ಣ ರ ಷ ಳ

---

೪) ದಂತದಲ್ಲಿ ಹುಟ್ಟುವ ವರ್ಣಗಳು:

ತ ಥ ದ ಧ ನ ಲ ಸ

---

೫) ಓಷ್ಠದಲ್ಲಿ ಹುಟ್ಟುವ ವರ್ಣಗಳು:

ಉ ಊ ಪ ಫ ಬ ಭ ಮ

---

೧) ಕಂಠ = ಕತ್ತು. ೨) ತಾಲು = ಅಣ್ಣಾಲಿಗೆ. ೩) ಮೂರ್ಧ = ಬಾಯೊಳಗಣಟ್ಟವು. ೪) ದಂತ = ಹಲ್ಲು. ೫) ಓಷ್ಠ = ತುಟಿ.

೧)ನಾಸಿಕೆಯಲ್ಲಿ ಹುಟ್ಟುವ ವರ್ಣಗಳು:

ಂ ಙ ಞ ಣ ನ

ಕಂಠ ತಾಲುಗಳಲ್ಲಿ ಹುಟ್ಟುವ ವರ್ಣಗಳು:

ಎ ಏ ಐ

ಕಂಠ ಓಷ್ಠಗಳಲ್ಲಿ ಹುಟ್ಟುವ ವರ್ಣಗಳು:

ಒ ಓ ಔ

೧) ನಾಸಿಕೆ = ಮೂಗು.



ಕಾಗುಣಿತವು.

	ă	ā	ĭ	ī	u	ū	
	ಅ	ಆ ಾ	ಇ ಿ	ಈ ೀ	ಉ ು	ಊ ೂ	ಋ ೃ
k	ಕ	ಕಾ	ಕಿ	ಕೀ	ಕು	ಕೂ	ಕೃ
kh	ಖ	ಖಾ	ಖಿ	ಖೀ	ಖು	ಖೂ	ಖೃ
g	ಗ	ಗಾ	ಗಿ	ಗೀ	ಗು	ಗೂ	ಗೃ
gh	ಘ	ಘಾ	ಘಿ	ಘೀ	ಘು	ಘೂ	ಘೃ
ng	ಙ	ಙಾ	ಙಿ	ಙೀ	ಙು	ಙೂ	ಙೃ
tsch	ಚ	ಚಾ	ಚಿ	ಚೀ	ಚು	ಚೂ	ಚೃ
tsch h	ಛ	ಛಾ	ಛಿ	ಛೀ	ಛು	ಛೂ	ಛೃ
dsch	ಜ	ಜಾ	ಜಿ	ಜೀ	ಜು	ಜೂ	ಜೃ
dsch h	ಝ	ಝಾ	ಝಿ	ಝೀ	ಝು	ಝೂ	ಝೃ
nj	ಞ	ಞಾ	ಞಿ	ಞೀ	ಞು	ಞೂ	ಞೃ
ṭ	ಟ	ಟಾ	ಟಿ	ಟೀ	ಟು	ಟೂ	ಟೃ
ṭh	ಠ	ಠಾ	ಠಿ	ಠೀ	ಠು	ಠೂ	ಠೃ
ḍ	ಡ	ಡಾ	ಡಿ	ಡೀ	ಡು	ಡೂ	ಡೃ
ḍh	ಢ	ಢಾ	ಢಿ	ಢೀ	ಢು	ಢೂ	ಢೃ
ṇ	ಣ	ಣಾ	ಣಿ	ಣೀ	ಣು	ಣೂ	ಣೃ
t	ತ	ತಾ	ತಿ	ತೀ	ತು	ತೂ	ತೃ
th	ಥ	ಥಾ	ಥಿ	ಥೀ	ಥು	ಥೂ	ಥೃ
d	ದ	ದಾ	ದಿ	ದೀ	ದು	ದೂ	ದೃ
dh	ಧ	ಧಾ	ಧಿ	ಧೀ	ಧು	ಧೂ	ಧೃ
n	ನ	ನಾ	ನಿ	ನೀ	ನು	ನೂ	ನೃ

ಕಾಗುಣಿತವು.

ĕ	ē	ei	ŏ	ō	au
ಎ ೆ	ಏ ೇ	ಐ ೈ	ಒ ೊ	ಓ ೋ	ಔ ೌ
ಕೆ	ಕೇ	ಕೈ	ಕೊ	ಕೋ	ಕೌ
ಖೆ	ಖೇ	ಖೈ	ಖೊ	ಖೋ	ಖೌ
ಗೆ	ಗೇ	ಗೈ	ಗೊ	ಗೋ	ಗೌ
ಘೆ	ಘೇ	ಘೈ	ಘೊ	ಘೋ	ಘೌ
ಙೆ	ಙೇ	ಙೈ	ಙೊ	ಙೋ	ಙೌ
ಚೆ	ಚೇ	ಚೈ	ಚೊ	ಚೋ	ಚೌ
ಛೆ	ಛೇ	ಛೈ	ಛೊ	ಛೋ	ಛೌ
ಜೆ	ಜೇ	ಜೈ	ಜೊ	ಜೋ	ಜೌ
ಝೆ	ಝೇ	ಝೈ	ಝೊ	ಝೋ	ಝೌ
ಞೆ	ಞೇ	ಞೈ	ಞೊ	ಞೋ	ಞೌ
ಟೆ	ಟೇ	ಟೈ	ಟೊ	ಟೋ	ಟೌ
ಠೆ	ಠೇ	ಠೈ	ಠೊ	ಠೋ	ಠೌ
ಡೆ	ಡೇ	ಡೈ	ಡೊ	ಡೋ	ಡೌ
ಢೆ	ಢೇ	ಢೈ	ಢೊ	ಢೋ	ಢೌ
ಣೆ	ಣೇ	ಣೈ	ಣೊ	ಣೋ	ಣೌ
ತೆ	ತೇ	ತೈ	ತೊ	ತೋ	ತೌ
ಥೆ	ಥೇ	ಥೈ	ಥೊ	ಥೋ	ಥೌ
ದೆ	ದೇ	ದೈ	ದೊ	ದೋ	ದೌ
ಧೆ	ಧೇ	ಧೈ	ಧೊ	ಧೋ	ಧೌ
ನೆ = nĕ	ನೇ = nē	ನೈ	ನೊ	ನೋ	ನೌ

ಕಾಗುಣಿತವು.

	ă	ā	i	ī	u	ū	
	ಅ	ಆ ಾ	ಇ ಿ	ಈ ೀ	ಉ ು	ಊ ೂ	ಋ ೃ
p	ಪ	ಪಾ	ಪಿ	ಪೀ	ಪು	ಪೂ	ಪೃ
ph	ಫ	ಫಾ	ಫಿ	ಫೀ	ಫು	ಫೂ	ಫೃ
b	ಬ	ಬಾ	ಬಿ	ಬೀ	ಬು	ಬೂ	ಬೃ
bh	ಭ	ಭಾ	ಭಿ	ಭೀ	ಭು	ಭೂ	ಭೃ
m	ಮ	ಮಾ	ಮಿ	ಮೀ	ಮು	ಮೂ	ಮೃ
j	ಯ	ಯಾ	ಯಿ	ಯೀ	ಯು	ಯೂ	ಯೃ
r	ರ	ರಾ	ರಿ	ರೀ	ರು	ರೂ	ರೃ
l	ಲ	ಲಾ	ಲಿ	ಲೀ	ಲು	ಲೂ	ಲೃ
w	ವ	ವಾ	ವಿ	ವೀ	ವು	ವೂ	ವೃ
sch	ಶ	ಶಾ	ಶಿ	ಶೀ	ಶು	ಶೂ	ಶೃ
sch	ಷ	ಷಾ	ಷಿ	ಷೀ	ಷು	ಷೂ	ಷೃ
s	ಸ	ಸಾ	ಸಿ	ಸೀ	ಸು	ಸೂ	ಸೃ
h	ಹ	ಹಾ	ಹಿ	ಹೀ	ಹು	ಹೂ	ಹೃ
ḷ	ಳ	ಳಾ	ಳಿ	ಳೀ	ಳು	ಳೂ	ಳೃ
ksh	ಕ್ಷ	ಕ್ಷಾ	ಕ್ಷಿ	ಕ್ಷೀ	ಕ್ಷು	ಕ್ಷೂ	ಕ್ಷೃ



ಕಾಗುಣಿತ್ತವು.

e	ē	ei	o	ō	au
ಎ ೆ	ಏ ೇ	ಐ ೈ	ಒ ೊ	ಓ ೋ	ಔ ೌ
ಪೆ	ಪೇ	ಪೈ	ಪೊ	ಪೋ	ಪೌ
ಫೆ	ಫೇ	ಫೈ	ಫೊ	ಫೋ	ಫೌ
ಬೆ	ಬೇ	ಬೈ	ಬೊ	ಬೋ	ಬೌ
ಭೆ	ಭೇ	ಭೈ	ಭೊ	ಭೋ	ಭೌ
ಮೆ	ಮೇ	ಮೈ	ಮೊ	ಮೋ	ಮೌ
ಯೆ	ಯೇ	ಯೈ	ಯೊ	ಯೋ	ಯೌ
ರೆ	ರೇ	ರೈ	ರೊ	ರೋ	ರೌ
ಲೆ	ಲೇ	ಲೈ	ಲೊ	ಲೋ	ಲೌ
ವೆ	ವೇ	ವೈ	ವೊ	ವೋ	ವೌ
ಶೆ	ಶೇ	ಶೈ	ಶೊ	ಶೋ	ಶೌ
ಷೆ	ಷೇ	ಷೈ	ಷೊ	ಷೋ	ಷೌ
ಸೆ	ಸೇ	ಸೈ	ಸೊ	ಸೋ	ಸೌ
ಹೆ	ಹೇ	ಹೈ	ಹೊ	ಹೋ	ಹೌ
ಳೆ	ಳೇ	ಳೈ	ಳೊ	ಳೋ	ಳೌ
ಕ್ಷೆ	ಕ್ಷೇ	ಕ್ಷೈ	ಕ್ಷೊ	ಕ್ಷೋ	ಕ್ಷೌ

ಶಬ್ದಗಳು.

ಏಕಾಕ್ಷರ ಶಬ್ದಗಳು.

ಆ	ಈ	ಕೈ	ಖೈ	ಗೋ	ತಾ	ನಾ	ನೀ
ನೌ	ಬಾ	ಬೈ	ಮಾ	ಮೈ	ವೈ	ಶೀ	ಹೂ

ದ್ವ್ಯಕ್ಷರ ಶಬ್ದಗಳು.

ಅರ	ಆನೆ	ಇಲಿ	ಈಗ	ಉಡು
ಊರು	ಎಲೆ	ಏಳು	ಐದು	ಒಲೆ
ಓಲೆ	ಔಡು	ಕಥೆ	ಕಾಗೆ	ಕಿವಿ
ಕೀಲು	ಕುರಿ	ಕೂಸು	ಕೆರೆ	ಕೇರಿ
ಕೈದು	ಕೊನೆ	ಕೋಣ	ಗಿಡ	ಘಾಯ
ಚಾಪೆ	ಜಡೆ	ತಲೆ	ದೀಪ	ಧೊರೆ
ನೀರು	ಪಾಠ	ಬಾಲ	ಭಾವಿ	ಮಠ
ಯುಗ	ರಾಗಿ	ಲೇಪ	ವೀರ	ಶೀರೆ
ಸಾಕು	ಹಣ	ಕ್ಷಮೆ	ಕ್ಷೇಮ	ಕ್ಷೋಣಿ

ತ್ರ್ಯಕ್ಷರ ಶಬ್ದಗಳು.

ಅಪೇಕ್ಷೆ	ಆಕಾರ	ಇರವು
ಈಳಿಗೆ	ಉಗುರು	ಊರಟೆ
ಎಲುವು	ಏಳಿಗೆ	ಐಮೂಲೆ
ಒಗಟು	ಓಗರ	ಔಷಧ
ಕಮಲ	ಗಮನ	ಘಳಿಗೆ
ಚಾಮರ	ಛಳಕು	ಜನನಿ
ಝುಗಳ	ಟಗರು	ಠಿಕಾಣಿ
ಡಾಲರಿ	ತರುಣಿ	ದೀವಿಗೆ
ಧರಣಿ	ನಾಗರ	ಪದವಿ

ಬದುಕು	ಬೆರಳು	ಭೋಜನ
ಮರುಳು	ಯೋಚನೆ	ರಾವುತ
ಲವಣ	ವಚನ	ಶೋಧನೆ
ಸುರಳಿ	ಹಸುರು	ಕ್ಷಾಳನ

ಚತುರಕ್ಷರ ಶಬ್ದಗಳು.

ಅರಸನು	ಆಲೋಚನೆ	ಉಪಯೋಗ
ಓಲೆಕಾರ	ಕನಿಕರ	ಗಲಿಬಿಲಿ
ಜಾಜಿಹೂವು	ನಿರಾಕಾರ	ಪರಲೋಕ
ಬೋಧಕನು	ಮುದುಕನು	ಶೆರೆಮನೆ
ಸಮಾಚಾರ	ಹುಡುಗನು	ಕ್ಷೌರಿಕನು

ಪಂಚಾಕ್ಷರ ಶಬ್ದಗಳು.

ಅಪರೂಪವು	ಆಲಾಪನೆಯು
ಉಪಶಮನ	ಎಳಚೀಮರ
ಏಕಮತವು	ಐರದಾಳಿಯು
ಕುರುಡತನ	ತೋಟಗಾರನು
ದನದವನು	ನಾಗಕೇಸರಿ
ಪರಾಜಯವು	ಬಳೆಗಾರನು
ಮೋಸಗಾರನು	ಯಜಮಾನನು
ಶನಿವಾರವು	ಸಹೋದರನು

ಷಡಕ್ಷರ ಶಬ್ದಗಳು.

ಅಪರಿಮಿತವು	ಆಭರಣಗಳು
ಈಚಲಮರವು	ಕರೆಯುವವನು
ಗಾರಡಿಗಾರನು	ಜನಸಮೂಹವು
ತಿಳುವಳಿಕೆಯು	ದುರಾಲೋಚನೆಯು
ಸಡಗರಣೆಯು	ಶಾನಭೋಗತನ

ಉಚ್ಚರಣೆ ಮಾಡುವಾಗ್ಯೆ ಸ್ವಲ್ಪ ಕಡಿಮೆ ಬಂದೇ ತರವಾಗಿ ಕೇಳುವ ಶಬ್ದಗಳು.

Katti	*Kutti*	*Katte*	*gadde*
ಕತ್ತಿ	ಕುತ್ತಿ	ಕತ್ತೆ	ಗದ್ದೆ
ಗಾದೆ	ಕಟ್ಟೆ	ಕಥೆ	ಕಟ್ಟು
ಕಿಟ್ಟು	ಕುಟ್ಟು	ಕುಟ್ಟೆ	ಕೂಟ
ಕೂಡ	ಕೇಡು	ಕೊಡೆ	ಕೋಟಿ
ಕೋಡಿ	ಕೋತಿ	ಕಚ್ಚಾ	ಕಾಚು
ಕಿಚ್ಚು	ಕುಚ	ಕೂಚು	ಕೂರು
ಗುರು	ಕರ	ಕರಿ	ಗರ
ಗರಿ	ಕರು	ಕರೆ	ಕಿರಿ
ಗಿರಿ	ಕುರಿ	ಗುರಿ	ಗಾರು
ಗಾರೆ	ಕೇರೆ	ಗೀರು	ಗೇರಿ
ಕೇರಿ	ಗೇರು	ಗೋರಿ	ಗೌರಿ
ಕೌರು	ಕಥೆ	ಕಪ್ಪ	ಕಪ್ಪೆ
		Kappa	

ಕಬ್ಬು	ಕಾಪಿ	ಕಾಪು	ಕುಪ್ಪು
ಕೂಪ	ಕುಪ್ಪೆ	ಕೋಪ	ಕೊಪು
ಕಣ	ಗಣ	ಕಣಿ	ಕಣೆ
ಕಾಣ	ಗಾಣ	ಕಾಣಿ	ಗಿಣಿ
ಗುಣ	ಗೇಣಿ	ಗೆಣೆ	ಗೋಣಿ
ಕೋಣ	ಕೋಣೆ	ಕಕ್ಕ	ಕಕ್ಕು
ಕಕ್ಕೆ	ಕುಕ್ಕಿ	ಕುಕ್ಕೆ	ಕೊಕ್ಕು
ಕೊಕ್ಕೆ	ಕಗ್ಗ	ಕಾಗಿ	ಕುಗ್ಗಿ
ಕಗ್ಗು	ಕಂಡ	ಕಂದ	ಕಂಡಿ
ಕಂಟ	ಕುಂಡ	ಕುಂಡೆ	ಕುಂಟ
ಕಂತು	ಕಂದು	ಕಾಂತ	ಕುಂತ
Kanti ಕಾಂತಿ	Kunti ಕುಂತಿ	ಚರ	ಜರ
ಚರು	ಚಾರು	ಚಿರ	ಚಿರಿ
ಜರಿ	ಚೂರು	ಚೂರಿ	ಚೋರಿ
ಜಾರು	ಜೋರು	ಜರೆ	ಜಾರ
ಜಾರೆ	ಜಡ	ಜಡಿ	ಜಾಡ
ಜೇಡಿ	ಜಡೆ	ಜೋಡು	ಜಟ್ಟಿ
ಜತೆ	ಜಾತಿ	ಜಿತ	ಜಿದ್ದು
ಜಗಲಿ	ಜಗಳ	ಜಗುಳು	ಜೋಗುಳ
ಜಿಗಳಿ	ಜಿಗರು	ತಟ್ಟು	ತಟ
ತಟ್ಟಿ	ತಾಟು	ತುಟಿ	ತೇಟಿ
ತೋಟ	ತೊಟ್ಟು	ತರಕ	ತರಕಿ

ತಾರಕ	ತಾರಕಿ	ತಿರಕ	ತೀರಿಕೆ
ತುರಕ	ತುರಗ	ತುರಗು	ತರಗು
ದನ	ದಾನ	ದಿನ	ದೀನ
ಧನ	ಧನಿ	ಧನು	ಧ್ಯಾನ
ಧಾನ್ಯ	ಧೇನು	ನರ	ನರಿ
ನರೆ	ನಾರಿ	ನಾರು	ನಿರಿ
ನೀರು	ನೆರೆ	ನೊರೆ	ನಗರ
ನಗರು	ನಗಾರಿ	ನಾಗರ	ನಿಗರ
ನರಕ	ನರಿಗ	ನಾಳಿಕ	ನಾಳೀಕ
ನಾಲಿಗೆ	ಪರ	ಪರಿ	ಪರೆ
ಪಾರ	ಪಾರೆ	ಪುರ	ಪೊರೆ
ಭರ	ಭಾರ	ಭಾರಿ	ಭೀರು
ಭೂರಿ	ಭೇರಿ	ಭೋರು	ಮಿತ್ರ
ಮೂತ್ರ	ಮಾತ್ರೆ	ಮಾದ್ರಿ	ಮುದ್ರೆ
ವರ	ವರೆ	ವಾರ	ವಾರಿ
ವಾರು	ವಾರೆ	ವೀರ	ಉರಿ
ಉರು	ಊರು	ವೈರ	ಸರ
ಸರಿ	ಸಾರ	ಸಾರಿ	ಸಾರು
ಸಿರ	ಸಿರಿ	ಸೇರೆ	ಸುರ
ಸರೆ	ಸುರೆ	ಸೂರೆ	ಸೇರು
ಸೋರೆ	ಸೋರು	ಸಂಕೇತ	ಸಂಕೇತಿ
ಸಂಗಾತ	ಸಂಗತಿ	ಸಂಗೀತ	ಸಂಗಡ

ಸಂಗಟ	ಸಿಂಗಾಡಿ	ಸರಳ	ಸರಾಳ
ಸರಳು	ಸರಸ	ಸರಸಿ	ಸರಸು
ಸಾರಸ	ಸಿರಸ್ಸು	ಸುರಸ	ಹಲ
ಹಲ್ಲಿ	ಹಲ್ಲು	ಹಳು	ಹಳ್ಳ
ಹಳ್ಳಿ	ಹಾಲು	ಹಾಲೆ	ಹಾಳೆ
ಹಾಳಿ	ಹಾಳು	ಹುಲಿ	ಹುಲು
ಹುಲ್ಲು	ಹುಲ್ಲೆ	ಹುಳ	ಹುಳಿ
ಹೊಲೆ	ಹೊಲಿ	ಹೋಳಿ	ಹೋಳು



ಶಬ್ದಾವಳಿಯು.

ಅರಳಿ	ಆಧಾರ	ಇರುಳು	ಈಡು	ಉರಗ	ಊಟ	ಋಣ
ಕಣ	ಕಾಲು	ಕಿಡಿ	ಕೀವು	ಕುಲ	ಕೂಲಿ	ಕೃಪೆ
ಖರೆ	ಖಾರ	ಖಿನ್ನ		ಖುರ	ಖೂಳ	
ಗಳ	ಗಾಣ	ಗಿಳಿ	ಗೀತ	ಗುಡಿ	ಗೂಡು	ಗೃಹ
ಘನ	ಘಾತ	ಘಿರ್ರನ್ನು	ಘೀಂಕಾರ	ಘುಟಿಕೆ	ಘೂಕ	ಘೃತ
ಚಡಿ	ಚಾಡಿ	ಚಿಗರಿ	ಚೀಲ	ಚುರುಕು	ಚೂರಿ	
ಛಡಿ	ಛಾಯೆ	ಛಿನ್ನ	ಛೀ	ಛುರಿಕೆ		
ಜಡ	ಜಾತಿ	ಜಿನಗು	ಜೀವ	ಜುನಗು	ಜೂಜು	
ಝಗಳ	ಝಾಡಿ		ಝಿಲ್ಲಿಕೆ	ಝುಮ್ಮು	ಝೂಲು	
ಟಗರು	ಟಾವು	ಟಿಟ್ಟಿಭ	ಟೀಕು		ಟೂಕಿ	
ಠಕ್ಕು	ಠಾಣೆ	ಠಿಕಾಣಿ	ಠೀವಿ			
ಡಬ್ಬು	ಡಾಬು	ಡಿಳ್ಳ	ಡೀಕಾಟ	ಡುಕ್ಕು		
ಢಕ್ಕ	ಢಾಕು	ಢಿಳ್ಳಿ		ಢುಳಿ		
ತಗರ	ತಾತ	ತಿಥಿ	ತೀರ	ತುಟಿ	ತೂತು	ತೃಣ
ಥರ	ಥಾಟು				ಥೂ	
ದಡ	ದಾರಿ	ದಿನ	ದೀನ	ದುರಿತ	ದೂರು	ದೃಢ
ಧನ	ಧಾತು	ಧಿಟ	ಧೀರ	ಧುರ	ಧೂಪ	ಧೃತಿ
ನರಿ	ನಾಯಿ	ನಿಜ	ನೀಲ	ನುಡಿ	ನೂರು	ನೃಪ
ಪಕ್ಷಿ	ಪಾಪ	ಪಿತ	ಪೀಡೆ	ಪುಡಿ	ಪೂಜೆ	ಪೃಥ್ವಿ
ಫಲ	ಫಾಲ	ಫಿದಲಿ		ಫುಲ್ಲ	ಫೂತ್ಕಾರ	
ಬಲ	ಬಾಲ	ಬಿಲ	ಬೀಜ	ಬುರುಡೆ	ಬೂದಿ	
ಭಯ	ಭಾಷೆ	ಭಿಕ್ಷೆ	ಭೀತಿ	ಭುಜ	ಭೂಮಿ	ಭೃಗು
ಮರ	ಮಾತು	ಮಿತಿ	ಮೀಶೆ	ಮುಖ	ಮೂಗು	ಮೃಗ
ಯವ	ಯಾತ			ಯುವತಿ	ಯೂಥ	
ರಥ	ರಾಶಿ	ರಿಪು	ರೀತಿ	ರುಚಿ	ರೂಢಿ	

ಶಬ್ದಾವಳಿಯು.

ಎದೆ	ಏಡಿ	ಐದು	ಒಡೆಯ	ಓದು	ಔತಣ
ಕೆಲಸ	ಕೇಡು	ಕೈರವ	ಕೊಡೆ	ಕೋತಿ	ಕೌಮಾರ
	ಖೇದ	ಖೈ	ಖೊಬರಿ	ಖೋಡಿ	
ಗೆರೆ	ಗೇಣು	ಗೈರಿಕ	ಗೊನೆ	ಗೋಧಿ	ಗೌಡ
	ಘೇರಿ		ಘೊಂಟೆ	ಘೋಷ	
ಚೆಲುವು	ಚೇಳು	ಚೈತನ್ಯ	ಚೊಗೆ	ಚೋಟು	ಚೌಕ
	ಛೇದ			ಛೋಜಿಗ	
ಜೆರಿ	ಜೇನು	ಜೈಮಿನಿ	ಜೊತೆ	ಜೋಳ	ಜೌಳಿ
	ಝೇಂಕಾರ		ಝೊಮ್ಮನೆ	ಝೋಪಡಿ	
ಟೆಕ್ಕೆ			ಟೊಳ್ಳು	ಟೋಪಿ	ಟೌಳಿ
	ಠೇವಣಿ		ಠೊಣಗ		ಠೌಳಿ
	ಡೇಗೆ		ಡೊಗರು	ಡೋಣಿ	ಡೌಲು
	ಢೇರ			ಢೋಕು	
ತೆರೆ	ತೇರು	ತೈಲ	ತೊಡೆ	ತೋಪು	ತೌಡು
ಥೆರೆ		ಥೈಲಿ			
ದೆಶಿ	ದೇಶ	ದೈವಿಕ	ದೊರೆ	ದೋಷ	ದೌತಿ
	ಧೇನು	ಧೈರ್ಯ	ಧೊರೆ	ಧೋರಣೆ	ಧೌತ
ನೆಲ	ನೇಗಲು	ನೈದಿಲೆ	ನೊಣ	ನೋಟ	ನೌಲು
ಪೆರಗು	ಪೇಟೆ	ಪೈರು	ಪೊದೆ	ಪೋರ	ಪೌರುಷ
	ಫೇನ	ಫೈಸಲು		ಫೋಡಿ	ಫೌಜು
ಬೆರಳು	ಬೇಲಿ	ಬೈಲು	ಬೊಗರಿ	ಬೋಧ	ಬೌದ್ಧ
	ಭೇದ	ಭೈರಿಗೆ		ಭೋಗ	ಭೌಮ
ಮೆಣಸು	ಮೇಣ	ಮೈದುನ	ಮೊನೆ	ಮೋಡ	ಮೌಳಿ
ಯೆಳ್ಳು	ಯೇಸು			ಯೋಗ	ಯೌವನ
ರೆಕ್ಕೆ	ರೇಣು	ರೈತ	ರೊಕ್ಕ	ರೋಗ	ರೌದ್ರ

ಲಯ	ಲಾಭ	ಲಿಪಿ	ಲೀನ	ಲುಭಿತ	ಲೂಟಿ	
ವನ	ವಾಸ	ವಿಧಿ	ವೀಣೆ			ವೃಕ್ಷ
ಶರ	ಶಾಪ	ಶಿಶು	ಶೀಸ	ಶುಕ	ಶೂರ	ಶೃಂಗ
ಷಷ್ಠಿ	ಷಾಷ್ಠ			ಷುರು		
ಸಭೆ	ಸಾಲ	ಸಿಗಿ	ಸೀಮೆ	ಸುಖ	ಸೂರೆ	ಸೃತಿ
ಹಡಗು	ಹಾಡು	ಹಿಡಿ	ಹೀನ	ಹುಲಿ	ಹೂವು	ಹೃದಯ
ಕ್ಷಣ	ಕ್ಷಾಮ	ಕ್ಷಿತಿ	ಕ್ಷೀಣ	ಕ್ಷುತ	ಕ್ಷೂಣತೆ	

ಒತ್ತಕ್ಷರಗಳ ಉದಾಹರಣೆಗಳು.

kk = ಕ್ಕ ಅಕ್ಕ ತಕ್ಕ ರಕ್ಕಸ ಬೊಕ್ಕಸ ಕೊಕ್ಕರೆ ರೊಕ್ಕ ಸಕ್ಕರೆ ಉತ್ಕಲಾ ಉಲ್ಕಾಪಾತ ಪುಷ್ಕಲ ನಿಷ್ಕಲೆ ಭಾಸ್ಕರ ತಸ್ಕರ ಮಸ್ಕು

kh = ಖ್ಖ ಲೆಖ್ಖ ದುಖ್ಖ ರೊಖ್ಖ ಒಖ್ಖಣಿಸು ಮುಖ್ಖ

gg = ಗ್ಗ ಮಗ್ಗಲು ನೆಗ್ಗಲು ನುಗ್ಗು ಹಿಗ್ಗು ತಗ್ಗು ಮುಗ್ಗು ಬೊಗ್ಗು ಉದ್ಗಮ

ggh = ಘ್ಘ ಅಘ್ಘ ಉದ್ಘಾಟನೆ

ಚ್ಚ ಅಚ್ಚ ವೆಚ್ಚ ಕಚ್ಚು ಕಿಚ್ಚು ಹುಚ್ಚು ನಿಶ್ಚಯ ಆಶ್ಚರ್ಯ ಪಶ್ಚಿಮ

ಛ್ಛ ತುಛ್ಛೀಕರಿಸು ಸ್ವಛ್ಛ ಗುಛ್ಛಾ ಇಛ್ಛೆ ಪರಿಛ್ಛೇದ ಶಿರಶ್ಛೇದನ

ಜ್ಜ ಸಜ್ಜನ ಅಜ್ಜಿ ಮಜ್ಜಿಗೆ ಕಜ್ಜಿ ಸಜ್ಜಿಗೆ ಸಜ್ಜೆ ಲಜ್ಜೆ ಅಬ್ಜ

ಝ್ಝ ಜಝ್ಝರಿತ

ಜ್ಞ ಜ್ಞಾನ ವಿಜ್ಞಾಪನೆ ಆಜ್ಞೆ ಸಂಜ್ಞೆ

ಟ್ಟ ಹೊಟ್ಟೆ ಹುಟ್ಟು ಹಟ್ಟಿ ಕಟ್ಟಳೆ ಪಟ್ಟಣ ಇಷ್ಟ ಕುಷ್ಟ ಅಷ್ಟು ಕಷ್ಟ ಭ್ರಷ್ಟ ನಷ್ಟ ಸ್ಪಷ್ಟ

ಠ್ಠ ಅಠ್ಠವಣೆ ರೋಗಿಷ್ಠ ಪಾಪಿಷ್ಠ ಅಂಗುಷ್ಠ ಶ್ರೇಷ್ಠ

ಡ್ಡ ಅಡ್ಡ ಗಿಡ್ಡ ಹೆಡ್ಡ ದೊಡ್ಡ ದುಡ್ಡು ಬಡ್ಡಿ ಬಡ್ಡು ಕಡ್ಡಿ

ಣ್ಣ ಕಣ್ಣು ಮಣ್ಣು ಹೆಣ್ಣು ಅಣ್ಣ ಉಷ್ಣ ಕೃಷ್ಣ ತೀಕ್ಷ್ಣ

ತ್ತ ಉತ್ತರ ಕತ್ತಲೆ ಅತ್ತೆ ಕತ್ತೆ ಅತ್ತಲಾಗಿ ಎತ್ತು ಮುತ್ತು ಹಿತ್ತಲು

u. s. w. in der gleichen Reihenfolge wie S. 10 ff.

ಲೆಖ್ಖ	ಲೇಖಣಿ		ಲೊಟ್ಟೆ	ಲೋಹ	ಲೌಕಿಕ
ವೆಡೆ	ವೇದ	ವೈರಿ	ವೊಡವೆ	ವೋಲಗ	
ಶೆರೆ	ಶೇಷ	ಶೈವ		ಶೋಕ	ಶೌರ್ಯ
			ಷೊಬಳಿ	ಷೋಡಶ	
ಸೆರಗು	ಸೇವೆ	ಸೈನಿಕ	ಸೊಗಸು	ಸೋರೆ	ಸೌದೆ
ಹೆಗಲು	ಹೇನು	ಹೈಕಳು	ಹೊಸ	ಹೋಮ	ಹೌದು
	ಕ್ಷೇಮ			ಕ್ಷೋಣಿ	ಕ್ಷೌರ

ರಕ್ತ ಉಕ್ತಿ ಭಕ್ತಿ ಮುಕ್ತಿ ಶಕ್ತಿ ಆಪ್ತ ತಪ್ತ ಗುಪ್ತ ಸಪ್ತ
ಪುಸ್ತಕ ಮಸ್ತಕ ಹಸ್ತ ಬಸ್ತಿ ಮಸ್ತಿ ಕುಸ್ತಿ ವಸ್ತು ಕಸ್ತೂರಿ
ಥ್ಥ ಅಶ್ವಥ್ಥ ಸ್ಥಳ ಸ್ಥಾನ ಸ್ಥಿತಿ
ದ್ದ ಗದ್ದಲ ಗುದ್ದಲಿ ಗದ್ದಿಗೆ ಗುದ್ದು ಮದ್ದು ಗದ್ದೆ ಶಬ್ದ
ದ್ಧ ಶುದ್ಧ ಸಿದ್ಧ ಯುದ್ಧ ವಿರುದ್ಧ ಪ್ರಸಿದ್ಧಿ ಲುಬ್ಧ ಮುಗ್ಧ ದಗ್ಧ
ನ್ನ ಅನ್ನ ಚಿನ್ನ ಪ್ರಸನ್ನ ಭಿನ್ನ ಸಂಪನ್ನ ಚನ್ನಾಗಿ ಚನ್ನಿಗ ಯತ್ನ ರತ್ನ
ಅಗ್ನಿ ಲಗ್ನ ಸ್ವಪ್ನ ಸ್ನಾನ ಸ್ನೇಹ ಪ್ರಶ್ನೆ ಮಧ್ಯಾಹ್ನ
ಪ್ಪ ಅಪ್ಪ ಚಪ್ಪರ ಚಪ್ಪಳಿ ಒಪ್ಪಿಗೆ ಉಪ್ಪು ಕಪ್ಪು ತಪ್ಪು ಸೊಪ್ಪು
ಇಪ್ಪೆ ಕಪ್ಪೆ ಚಪ್ಪೆ ಅಲ್ಪ ಕಲ್ಪ ಪುಷ್ಪ ಉತ್ಪತ್ತಿ
ಫ್ಫ ನಿಷ್ಫಲ ಸತ್ಫಲ ಸ್ಫಟಿಕ ಸ್ಫಾರ ಸ್ಫೀತ ಸ್ಫುಟ
ಬ್ಬ ಒಬ್ಬ ಕಬ್ಬು ಕೊಬ್ಬು ಹಬ್ಬ ಕಬ್ಬಿಣ ಮೊಬ್ಬು ಉಬ್ಬು ಉದ್ಬಲ
ಭ್ಭ ಉದ್ಭವ ಅದ್ಭುತ ತದ್ಭವ ಸದ್ಭಕ್ತಿ ಉದ್ಭಟ ಸದ್ಭಾವ
ಮ್ಮ ಅಮ್ಮ ಘಮ್ಮನೆ ಸುಮ್ಮನೆ ದಮ್ಮು ಹೆಮ್ಮೆ ಯುಗ್ಮ ಷಣ್ಮುಖ
ಆತ್ಮ ಕಲ್ಮಷ ಕಶ್ಮಲ ಸ್ಮಶಾನ ಆಕಸ್ಮಿತ ವಿಸ್ಮಯ ಸ್ಮೃತಿ ಸ್ಮರ
ಸ್ಮರಣೆ ಸನ್ಮಾನ ಸ್ಮಯ ತಾಳ್ಮೆ
ಯ್ಯ ಅಯ್ಯ ವಾಕ್ಯ ಆಖ್ಯಾತ ಆಗ್ಯೆ ಯೋಗ್ಯ ಅವಾಚ್ಯ ಪೂಜ್ಯ
ವ್ಯಾಜ್ಯ ಜ್ಯೋತಿ ತ್ಯಾಗ ತ್ಯಾವ ನಿತ್ಯ ಕೃತ್ಯ ಸತ್ಯ ಆತಿಥ್ಯ

ವಿದ್ಯ ಉದ್ಯೋಗ ಧ್ಯಾನ ನ್ಯಾಯ ರಮ್ಯ ತಾರತಮ್ಯ
ಪಲ್ಯ ಮೌಲ್ಯ ಅವ್ಯಯ ಹವ್ಯ ಶಿಷ್ಯ ವೇಶ್ಯ ಆಲಸ್ಯ
ಅಪಹಾಸ್ಯ ಉದ್ದಿಶ್ಯ ಹ್ಯಾಗೆ ಪಾಳ್ಯ

ರ್ರ ಘರ್ರನೆ ತಿರ್ರನೆ ಪರ್ರನೆ ಕರ್ರಗೆ ಚಕ್ರ ಕ್ರಮ ಗ್ರಾಮ ಗ್ರೀವ
ಘ್ರಾಣ ವಜ್ರ ಮಾತ್ರ ಪಾತ್ರೆ ಪತ್ರ ಕ್ಷುದ್ರ ದರಿದ್ರ ಭದ್ರ
ರುದ್ರ ವಿಪ್ರ ಕ್ಷಿಪ್ರ ಶುಭ್ರ ನಮ್ರ ವ್ರಯ ತೀವ್ರ ಶ್ರೇಯ
ಶ್ರೋತ್ರ ಸಹಸ್ರ ಹ್ರಾಸ

ರ್ಗ ಅರ್ಕ ತರ್ಕ ಮರ್ಕಟ ಮೂರ್ಖ ದುರ್ಗ ಮಾರ್ಗ ವರ್ಗ
ಅರ್ಘ ದೀರ್ಘ ಅರ್ಚನೆ ಚರ್ಚೆ ಮೂರ್ಛೆ ವಿಸರ್ಜನ ಗ
ರ್ಜನ ಆರ್ಜಿತ ನಿರ್ಝರ ಕರ್ಣ ವರ್ಣ ವಿಸ್ತೀರ್ಣ ಆರ್ತವ
ಕಾರ್ತೀಕ ವಾರ್ತೆ ಅರ್ಥ ಸಮರ್ಥ ಮರ್ದನ ಅರ್ಧ ವ
ರ್ಧನ ಅರ್ಪಣೆ ತರ್ಪಣೆ ಅರ್ಬುದ ನಿರ್ಬಲ ಆರ್ಭಟ ಗರ್ಭ
ದರ್ಭೆ ಕರ್ಮ ನಿರ್ಮಲ ದುರ್ಮತ ಕಾರ್ಯ ಧೈರ್ಯ ವೀ
ರ್ಯ ದುರ್ಲಭ ದುರ್ವಾರ್ತೆ ಹರ್ಷ ಕರ್ಷಣೆ ಅರ್ಹ

ಲ್ಲ ಮೆಲ್ಲಗೆ ಸೊಲ್ಲು ಕಲ್ಲು ಹುಲ್ಲು ಮಲ್ಲಿಗೆ ವಿಕ್ಲಭ ಕ್ಲೀಬ
ಪ್ಲವಂಗ ಆಮ್ಲ ಶ್ಲೇಷ್ಮ ಶುಕ್ಲ ಬೆಲ್ಲ ಭಲ್ಲ ಭಲ್ಲುಕ

ವ್ವ ಅವ್ವ ಪಕ್ವ ವಾಗ್ವಾದ ಉಛ್ವಾಸ ಜ್ವಾಲೆ ಪ್ರಜ್ವಲ ಶಾಡ್ವಲ
ತ್ವರಿತ ಶುದ್ಧತ್ವ ಸದ್ವಂಶ ಅಧ್ವರ ಅಧ್ವಾನ ಅನ್ವಯ ಪಲ್ವಲ
ಅಶ್ವ ಶಾಶ್ವತ ಸ್ವಭಾವ ಸ್ವಾಮಿ ಪೃಥ್ವಿ ಸತ್ವ ತತ್ವ

ಶ್ಶ ನಿಶ್ಶಬ್ದ ನಿಶ್ಶಕ್ತಿ

ಸ್ಸ ಮನಸ್ಸು ತಪಸ್ಸು ನಿಸ್ಸಾರ ಉತ್ಸವ ಮತ್ಸರ ಸಂವತ್ಸರ ಅಪ್ಸರ

ಹ್ಣ ಕಲ್ಹಾರ ಮಧ್ಯಾಹ್ನ

ಳ್ಳ ಉಳ್ಳ ಕಳ್ಳ ಹಳ್ಳ ಕಳ್ಳಿ ಕೊಳ್ಳಿ ಬಳ್ಳಿ ಹಳ್ಳಿ ಮುಳ್ಳು ಸುಳ್ಳು

ಎರಡು ಒತ್ತು ಕೂಡಿದ ಅಕ್ಷರಗಳು.

Strija Waktra

ಸ್ತ್ರೀಯು ವಕ್ತ್ರ ಮರ್ತ್ಯ ಊರ್ಧ್ವ ಅರ್ಘ್ಯ ದುಷ್ಕೃತ ಮಹಾರಾಷ್ಟ್ರ ಯಾಜ್ಞವಲ್ಕ್ಯ ಅಗಸ್ತ್ಯ ತಾರ್ಕ್ಷ್ಯ ತೀಕ್ಷ್ಣ ದಾರ್ಢ್ಯ.

ಅನುಸ್ವಾರವು ಂ. = n vor gewissen Lauten

anke

ಅಂಕೆ ಶಂಖ ಅಂಗಿ ಅಂಗೈಯಿ ಮುಂಗೈಯಿ ಲಂಘನೆ ಚಂಚಲ ಮ್ಲೇಂಛ ಅಂಜಲಿ ಅಂಟು ಒಂಟಿ ಕಂಠ ಗಂಡು ಅಂಣ ಮಂಣು ಅಂತ್ಯ ಕಾಂತಿ ಗ್ರಂಥ ಎಂದೆಂದಿಗೂ ಬಂಧನ ಚಿಂನ ಅಂನ ಸಂಪಿಗೆ ಗುಂಪು ಸಂಪುಲ್ಲ ಉಂಬಳಿ ಕಂಬಳಿ ಸಂಬಂಧ ಸ್ತಂಭ ಕುಂಭಿಣಿ ತಂಮ ಸಂಮತಿ ಕೆಂಮು ಸಂಯಮಿ ಸಂಯೋಗ ಸಂರಕ್ಷಣೆ ಸಂಲಾಪ ಸಂವತ್ಸರ ಸಂಶಯ ಅಂಶ ಮಾಂಸ ಹಂಸ ಸಂಸ್ಕೃತ ಸಂಸಾರ ಸಿಂಹ ಸಂಹಾರ ಸಂಕ್ಷೇಪ.

ವಿಸರ್ಗವು ಃ. = h (Sanskrit)

ಅಂತಃಕರಣ ಪ್ರಾತಃಕಾಲ ಮನಃಪೂರ್ವಕ ಪುನಃಸ್ಥಾಪನೆ.

ಅರ್ಧ ವ್ಯಂಜನಗಳು.

ಕ್ ಖ್ ಗ್ ಘ್ ಚ್ ಛ್ ಜ್—ಇತ್ಯಾದಿ.

ಕೋರ್ಟ್ ಕ್ವೀನ್ ಸ್ಟೆಂಪ್ ಜೈಲ್ ಇಂಗ್ಲಾಂದ್ ಏಪ್ರಿಲ್ ಮಾಸ್ತರ್ ಸ್ಟೀಮರ್ ಕಲೆಕ್ಟರ್ ಮೆಜಿಸ್ಟ್ರೇಟ್ ಪೋಲೀಸ್ ಆಪೀಲ್ ಬಾಸಲ್ ಮಿಶನ್ ಬುಕ್ ಶಾಪ್.

ಕೂಡಿಸಿದ ಮಾತುಗಳು.

ಬಾಳೆ ಗಿಡ	ಸಂಪಿಗೆ ಹೂವು	ತಿಗಳು ದೇಶ
ಜಾಲಿ ಮುಳ್ಳು	ಜಾಜಿ ಹೂವು	ಚೀನಾ ದೇಶ

ನಿಂಬೆ ಹಣ್ಣು	ರಾಗಿ ಹುಲ್ಲು	ಹಂಪೆ ಪಟ್ಟಣ
ದ್ರಾಕ್ಷೆ ಹಣ್ಣು	ಭತ್ತದ ಹುಲ್ಲು	ಶ್ರೀರಂಗಪಟ್ಟಣ
ತೆಂಗಿನ ಕಾಯಿ	ಡೊಣ್ಣೆ ಮುಳ್ಳು	ಕನ್ನಡ ಮಾತು
ನುಗ್ಗೆ ಕಾಯಿ	ಈಚಲ ಮುಳ್ಳು	ಜೇನು ತುಪ್ಪ
ಅವರೆ ಬಳ್ಳಿ	ಮಾವಿನ ಮರ	ಕಾವೇರಿ ನದಿ
ಮಲ್ಲಿಗೆ ಬಳ್ಳಿ	ಹೂವಿನ ಗಿಡ	ಗಂಗಾ ನದಿ
ಕೆಂಪು ರಕ್ತ	ಕಪ್ಪು ಶೀರೆ	ಬಿಳೀ ಕುದುರೆ
ಹಳದಿ ವಸ್ತ್ರ	ನೀಲ ಕಲ್ಲು	ಹಸುರು ಎಲೆ
ಹುಳಿ ರಸ	ಸವಿ ಸಕ್ಕರೆ	ಸಣ್ಣ ಮನೆ
ದೊಡ್ಡ ತೋಟ	ನೆಟ್ಟನೆ ದಾರಿ	ಸೊಟ್ಟ ಹಾದಿ
ಸತ್ಯ ಮಾತು	ಸುಳ್ಳು ಕಲ್ಪನೆ	ಶುದ್ಧ ಮನಸ್ಸು
ನಿರ್ಮಲ ಜಲ	ಒಳ್ಳೇ ಮಗ	ಪ್ರಿಯ ತಂದೆ
ಶ್ರೇಷ್ಠ ಗುರು	ಬಡ ಪಾಪಿ	ಹೆಡ್ಡ ಬುದ್ಧಿ
ಹಗೂರು ಹೊರೆ	ಮೂರ್ಖ ಹುಡುಗ	ಗಿಡ್ಡ ಮನುಷ್ಯ

ನನ್ನ ಕೈಯಿ	ನಿನ್ನ ಕಾಲು	ಅವನ ಮಾತು
ಅವಳ ಹೆಸರು	ಅದರ ಕಾರ್ಯ	ನಮ್ಮ ಸಾಲೆ
ನಿಮ್ಮ ಊರು	ಅವರ ನಡತೆ	ಅವುಗಳ ಲೆಖ್ಖ
ತನ್ನ ದೋಷ	ತಮ್ಮ ದಯ	ದೇವರ ಪ್ರೀತಿ
ಮನುಷ್ಯರ ಪಾಪ	ತಂದೆಯ ಚಿತ್ತ	ಪುತ್ರನ ಸಂತೋಷ
ಹುಡುಗರ ಪಾಠ	ಮಕ್ಕಳ ಆಟ	ತೋಟದ ಭಾವಿ
ರಾಯರ ಕಾಲ	ಹಿರಿಯರ ಮಾತು	ಹಾವಿನ ಹುತ್ತ
ಪಕ್ಷಿಯ ಗೂಡು	ಊರಿನ ಜನ	ಹೊಲದ ಬೆಳೆ

ಬರುವ ವರುಷ ಹೋದ ತಿಂಗಳು ಕೇಳದ ಕಿವಿ
ಕೃಪೆಯುಳ್ಳ ದೇವರು ಬಲವಾದ ಕೋಟೆ ಲೆಖ್ಖವಿಲ್ಲದ ನಕ್ಷತ್ರಗಳು

ಬುದ್ಧಿಹೀನ ಮಗನು	ಒಬ್ಬ ಬ್ರಾಹ್ಮಣನು	ಒಂದು ಕೂಸು
ಏಕ ದೇವರು	ಸ್ವಲ್ಪ ಮಂದಿ	ಕೆಲವು ಜನ
ಅನೇಕ ದೇಶಗಳು	ಬಹಳ ನಿವಾಸಿಗಳು	ಬಹಳ ತೊಂದರೆ
ಅಷ್ಟು ದೂರ	ಇಷ್ಟು ಹೊತ್ತು	ಎಷ್ಟು ಘಂಟೆ
ಸಮಸ್ತ ಜನರು	ತುಂಬ ಬೆಳೆ	ರಾಶಿ ಹಣ

ತಂದೆ ತಾಯಿ	ಅಣ್ಣ ತಮ್ಮ	ಅಕ್ಕ ತಂಗಿ
ದನ ಕರು	ಹೆಂಡರು ಮಕ್ಕಳು	ಅನ್ನ ಪಾನ
ವಸ್ತ್ರ ಹೊದಿಕೆ	ಹೊಲ ಮನೆ	ಹೊನ್ನು ಹಣ
ಬದುಕು ಬಾಳು	ಮನೆ ಮಾರು	ಹಣ್ಣು ಹಂಪಲು
ಹಳ್ಳಿ ಪಳ್ಳಿ	ಮರವು ಸರವು	ಆಟ ಪಾಟ
ತಗ್ಗು ಮುಗ್ಗು	ಹಕ್ಕಿ ಪಕ್ಕಿ	ಹಬ್ಬ ಗಿಬ್ಬ

ಮೂಲ ಮಾತುಗಳಿಂದ ಹುಟ್ಟಿದ ಮಾತುಗಳು.

ಕಟ್ಟು, ಕಟ್ಟೆ, ಕಟ್ಟಳೆ, ಕಟ್ಟಿಗೆ. ಮೋಸ, ಮೋಸಗಾರ, ಮೋಸಗಾರ್ತಿ. ಕಳ್ಳ, ಕಳ್ಳತನ. ಕೆಂಪು, ಕೆಮ್ಮಣ್ಣು, ಕೆಂದವರೆ, ಕೆನ್ನೆಲ, ಕೆಂಧೂಳು. ಆಡು, ಆಟ, ಮಕ್ಕಳಾಟಿಕೆ, ಆಟಗುಳಿ. ಮಾತು, ಮಾತಾಳಿ. ಗಾಣ, ಗಾಣಿಗನು. ಕಂಚು, ಕಂಚುಗಾರನು. ಲಂಚ, ಲಂಚವಣಿಗನು. ಹೂವು, ಹೂವಡಿಗನು. ಭೋಗ, ಅನುಭೋಗ, ಸಂಭೋಗ, ಭೋಜನ. ಚಾರ, ಆಚಾರ, ಆಚಾರ್ಯ, ಪರಿಚಾರ, ಪಡಿಚಾರಕ, ಉಪಚಾರ, ವಿಚಾರ, ವಿಚಾರಣೆ, ವ್ಯಭಿಚಾರ, ಸಂಚಾರ, ಉಚ್ಚಾರ. ಆಹಾರ, ಪರಿಹಾರ, ಸಂಹಾರ, ಉ

ದಾಹರಣೆ. ವರ್ತಕ, ವರ್ತಮಾನ, ಪ್ರವರ್ತನೆ. ಯೋಗ, ಪ್ರಯೋಗ, ಯೋಗ್ಯ, ಪ್ರಯೋಜನ. ಯುಕ್ತ, ಸಂಯುಕ್ತ, ವಿಯುಕ್ತ, ಅಯುಕ್ತ. ಯುಗ, ಯುಗಳಿ, ಯೋಗಿ, ಯುಗ್ಮ. ಶ್ವಾಸ, ವಿಶ್ವಾಸ, ಉಚ್ಛ್ವಾಸ, ನಿಶ್ವಾಸ. ಹಾಸ್ಯ, ಹಾಸ್ಯಗಾರ, ಅಪಹಾಸಕ.

ಅಭಿಪ್ರಾಯಗಳು.

ಅಪ್ಪ ಹೇಳು. ಬಿಸಲು ಹೋಗಲಿ.
ಮಗನೇ ಕೇಳು. ತಂಪು ಬರಲಿ.
ಅವ್ವಾ ಕೊಡು. ದೇವರ ಚಿತ್ತವು ಆಗಲಿ.
ಮಗಳೇ ಬೀಸು. ಕರ್ತನ ರಾಜ್ಯವು ಬರಲಿ.

ಏ ಹುಡುಗ ಬಾ. ಮಾತುಗಳನ್ನು ಓದು.
ಬಾಗಲ ಮುಚ್ಚು. ಅಕ್ಷರಗಳನ್ನು ಬರೆ.
ಕಿಟಿಕಿ ತೆರಿ. ಲೆಖ್ಖಗಳನ್ನು ಮಾಡು.
ಪುಸ್ತಕ ತಾ. ಪಾಠಗಳನ್ನು ಹೇಳು.
ಕಿವಿಗಳಿಂದ ಕೇಳು. ಅಯ್ಯನಿಗೆ ಉತ್ತರ ಕೊಡು.
ಬುದ್ಧಿಯಿಂದ ತಿಳಿ. ಹಿರಿಯರಿಗೆ ಕಿವಿ ಕೊಡು.
ಜಾಗ್ರತೆಯಿಂದ ಕಲಿ. ದೇವರಲ್ಲಿ ಮನಸ್ಸಿಡು.

ಬೋಧಕನ ಉಪದೇಶ ಕೇಳು. ಮನಸ್ಸಿನಲ್ಲಿ ಎಣಿಸು.
ದೇವರ ವಾಕ್ಯ ಓದು. ಹೃದಯದಲ್ಲಿ ಗ್ರಹಿಸು.
ಶ್ಲೋಕಗಳ ಅರ್ಥ ವಿಚಾರಿಸು. ಆತ್ಮದಲ್ಲಿ ಅರಿ.

ಹುಡುಗರು ವಿದ್ಯ ಕಲಿಯ ಬೇಕು.
ಪುರುಷರು ಕಷ್ಟ ಮಾಡ ಬೇಕು.
ಅರಸುಗಳು ರಾಜ್ಯವಾಳ ಬೇಕು.
ಎಲ್ಲರು ಸಾಯ ಬೇಕು.

ಮನುಷ್ಯರನ್ನು ಕೊಲ್ಲ ಬೇಡ.
ನೆರೆಯವರನ್ನು ಬೈ ಬೇಡ.
ಹೊಟ್ಟೆಕಿಚ್ಚು ಪಡ ಬೇಡ.
ಸುಮ್ಮನೆ ಅಳ ಬೇಡ.

ನಾನು ಓದ ಬಹುದು.
ನೀನು ಬರೆಯ ಬಹುದು.
ನಾವು ಹೋಗ ಬಹುದು.
ನೀವು ಸಾಲೆಯಲ್ಲಿ ನಿಲ್ಲ ಬಹುದು.

ಕಳ್ಳತನ ಮಾಡ ಬಾರದು.
ಸುಳ್ಳು ಹೇಳ ಬಾರದು.
ಸಾಲೆಯಲ್ಲಿ ಆಡ ಬಾರದು.
ಆಲಸ್ಯದಿಂದಿರ ಬಾರದು.

ನಾನು ಸಾಲೆಯಲ್ಲಿದ್ಧೇನೆ.
ನಾನು ಚಿಕ್ಕ ಹುಡುಗನಾಗಿರುತ್ತೇನೆ.
ನೀನು ನನ್ನ ಹತ್ತರ ಇದ್ಧೀ.
ನೀನು ನನ್ನ ಸ್ನೇಹಿತನಾಗಿರುತ್ತೀ.
ಅವನು ಪ್ರಯಾಣಕ್ಕೆ ಹೋಗಿದ್ಧಾನೆ.
ದೇವರು ಎಲ್ಲಿಯೂ ಇರುತ್ತಾನೆ.
ತಾಯಿಯು ಮನೆಯಲ್ಲಿದ್ಧಾಳೆ.
ಆಕೆ ಒಳ್ಳೆಯವಳಾಗಿರುತ್ತಾಳೆ.
ಮೋಡದಲ್ಲಿ ಸಿಡಿಲು ಅದೆ.

ಮರದಲ್ಲಿ ಪಕ್ಷಿ ಗೂಡು ಇರುತ್ತದೆ.
ನಾವು ವಿದ್ಯ ಕಲಿಯುತ್ತಾ ಇದ್ಧೇವೆ.
ನಾವೆಲ್ಲರೂ ಪಾಪಿಷ್ಟರಾಗಿರುತ್ತೇವೆ.
ನೀವು ಬರೆಯುತ್ತಾ ಇದ್ಧೀರಿ.
ನೀವು ನಮ್ಮ ಕೂಡಾ ಇರುತ್ತೀರಿ.
ಒಕ್ಕಲಿಗರು ಹೊಲದಲ್ಲಿ ಇರುತ್ತಾರೆ.
ಮನುಷ್ಯರು ದೇವರ ಕೈಯಲ್ಲಿರುತ್ತಾರೆ.
ಹೆಂಗಸರು ಅಡಿಗೆ ಮಾಡುತ್ತಾರೆ.
ಹೆಂಣುಮಕ್ಕಳು ತೋಟದಲ್ಲಿ ಆಡುತ್ತಾರೆ.
ನಕ್ಷತ್ರಗಳು ಆಕಾಶದಲ್ಲಿ ಅವೆ.
ಅಡವಿಯಲ್ಲಿ ಕಾಡ ಮೃಗಗಳು ಇರುತ್ತವೆ.

ನಾನು ವಿದ್ಯಾಭ್ಯಾಸವನ್ನು ಮಾಡುತ್ತೇನೆ.
ನೀನು ನಿನ್ನ ಹಲಿಗೆಯ ಮೇಲೆ ಲೆಖ್ಖ ಮಾಡುತ್ತೀ.
ನನ್ನ ತಂದೆಯು ಊರಲ್ಲಿ ಕುಟುಂಬ ಸಂರಕ್ಷಣೆ ಮಾಡುತ್ತಾನೆ.
ನನ್ನ ತಾಯಿಯು ಮನೆಯಲ್ಲಿ ಕೆಲಸ ಮಾಡುತ್ತಾಳೆ.
ಕೂಸು ತಂದೆತಾಯಿಗಳಿಗೆ ಉಪದ್ರ ಮಾಡುತ್ತದೆ.
ನಾವು ದೇವರಿಗೆ ವಿರೋಧವಾಗಿ ಬಹಳ ಪಾಪ ಮಾಡುತ್ತೇವೆ.
ನೀವು ನಮ್ಮ ಹಾಗೆ ಪ್ರತಿ ದಿನವೂ ತಪ್ಪು ಮಾಡುತ್ತೀರಿ.

ತಂದೆತಾಯಿಗಳು ನಮಗೆ ಬಹಳ ಉಪಕಾರ ಮಾಡು ತ್ತಾರೆ.

ಮುಳ್ಳುಹಂದಿಗಳು ತೋಟವನ್ನು ಹಾಳು ಮಾಡುತ್ತವೆ.

ಆಟದಲ್ಲಿ ಒಬ್ಬನು ಗೆಲ್ಲುತ್ತಾನೆ.
ಅವನು ನಗುತ್ತಾನೆ.
ಸಂತೆಯಲ್ಲಿ ಒಬ್ಬನು ಮಾರುತ್ತಾನೆ.
ಈತನು ತಕ್ಕ ಕ್ರಯ ಕೊಡ ಬೇಕು.
ಬೇರೊಬ್ಬನು ಸೋಲುತ್ತಾನೆ.
ಇವನು ಅಳುತ್ತಾನೆ.
ಮತ್ತೊಬ್ಬನು ಕೊಳ್ಳುತ್ತಾನೆ.
ಆತನು ಮೋಸ ಮಾಡ ಬಾರದು.

ಕೆಟ್ಟ ಹುಡುಗರು ಸುಮ್ಮನೆ ಒಬ್ಬರ ಸಂಗಡ ಒಬ್ಬರು ಜ ಗಳವಾಡುತ್ತಾರೆ.

ಅವರು ಹೊಟ್ಟೆಕಿಚ್ಚಿನಿಂದ ಒಬ್ಬರನ್ನೊಬ್ಬರು ಹೊಡೆಯು ತ್ತಾರೆ.

ಹೀಗೆ ಇರ ಬಾರದು. ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು.

ಪ್ರಶ್ನೆಗಳು.

ಯಾವನು ಜಗತ್ತನ್ನು ಆಳುತ್ತಾನೆ?

ಯಾವನಿಗೆ ಸರ್ವತ್ರಾಣವು ಇರುತ್ತದೆ?

ಯಾವನ ಸಿಂಹಾಸನವು ಪರಲೋಕದಲ್ಲಿ ಅದೆ?
ಯಾವನನ್ನು ಎಲ್ಲಕ್ಕಿಂತ ಹೆಚ್ಚಾಗಿ ಸ್ನೇಹಿಸ ಬೇಕು?
ಯಾವನಿಂದ ಈ ಲೋಕ ಉಂಟಾಯಿತು?
ಯಾವನಲ್ಲಿ ದೋಷವಿಲ್ಲ?
ಓ ನಮ್ಮ ದೇವರೇ, ನೀ ಎಂಥವನೋ?

ಮನುಷ್ಯರಿಗೂ ಮೃಗಗಳಿಗೂ ಹೆಚ್ಚು ಕಡಿಮೆ ಏನದೆ?
ಮೂರ್ಖ ಹುಡುಗರಿಗೆ ಏನು ಮಾಡ ಬೇಕು?
ಔಷಧ ಯಾತಕ್ಕೆ ಬೇಕು?
ರೋಗ ಯಾವದರಿಂದ ಬರುತ್ತದೆ?
ಕಷ್ಟ ಯಾವದರ ಫಲ?
ಬೋಧಕರು ಯಾವದರಲ್ಲಿ ಸಂತೋಷ ಪಡುತ್ತಾರೆ?
ದುಷ್ಟರ ಗತಿ ಯಾವದೋ?

ಯಾವ ಅರಸನಿಗೆ ಎಲ್ಲಾ ಅರಸುಗಳು ಒಳಗಾಗಿರುತ್ತಾರೆ?
ಯಾವ ದೀಪವು ಮನುಷ್ಯರೆಲ್ಲರಿಗೆ ಬೆಳಕು ಕೊಡುತ್ತದೆ?
ಎಲ್ಲಾ ವಿದ್ಯೆಗಳಲ್ಲಿ ಶ್ರೇಷ್ಠವಾದ ವಿದ್ಯೆ ಯಾವದು?
ಒಳ್ಳೇ ಹುಡುಗರಿಗೆ ಉತ್ತಮವಾದ ಸ್ನೇಹಿತರು ಯಾರು?
ಎಂಥಾ ಮಗನಲ್ಲಿ ತಂದೆಯು ಸಂತೋಷ ಪಡುತ್ತಾನೆ?
ಎಂಥಾ ಮಗಳು ತಾಯಿಗೆ ದುಃಖ ಪಡಿಸುತ್ತಾಳೆ?

ನಮಗೆ ಉಪಕಾರ ಮಾಡುವವರು ಯಾರೋ ಅವರಲ್ಲಿ ಪ್ರೀತಿ ಇಡುತ್ತೇವೆ.

ನಿನ್ನ ಸ್ನೇಹಿತರು ಎಂಥವರೋ ಅಂಥವನು ನೀನೇ.

ಆಕಾಶದಲ್ಲಿ ಎಷ್ಟು ನಕ್ಷತ್ರಗಳೋ ಸಮುದ್ರದಲ್ಲಿ ಎಷ್ಟು ನೀರೋ.

ಎಷ್ಟು ಸುಖವು ಪರಲೋಕದಲ್ಲಿಯೋ ಅಷ್ಟು ಶ್ರಮವು ನರಕದಲ್ಲಿ.

ಎಷ್ಟು ಸಾರಿ ನಾಡಿ ಹೊಡಿಯುತ್ತದೆಯೋ ಅಷ್ಟು ಸರ್ತಿ ದೇವರನ್ನು ಸ್ಮರಿಸು.

ಕಲ್ಲು ನೋಡ ಬಲ್ಲುದೆ? ಕೊರಡು ನಡೆಯ ಬಲ್ಲುದೆ?

ಮೂರ್ತಿಗಳು ಮಾತಾಡ ಬಲ್ಲವೆ? ವಿಗ್ರಹಗಳು ಕೇಳ ಬಲ್ಲವೆ?

ಮೂಢ ಬಲ್ಲನೆ ಜ್ಞಾನ ದೃಢ ಭಕ್ತಿಯ?
ಕಾಡ ಕಪಿ ಬಲ್ಲುದೆ ಮಾಣಿಕದ ಬೆಲೆಯ?
ಕೋಣ ಬಲ್ಲುದೆ ವೇದವನ್ನೋದಿ ಪಠಿಸಲಿಕ್ಕೆ?

ಗೋಣಿ ಬಲ್ಲುದೆ ಎತ್ತಿನ ಸುಖ ದುಃಖವ?
ಹಾವಿನ ಮರಿ ತಂದು ಹಾಲೆರದು ಸಾಕಿದರೆ,
ಬಾಯಿಯೊಳಗಣ ವಿಷವ ಬಿಡ ಬಲ್ಲುದೆ?

ಮನುಷ್ಯರಲ್ಲಿ ನಿರ್ಮಲ ನಡತೆ ಉಂಟೇ?
ವೈಗಳರಿಗೆ ಕೂಲಿ ಬೇಕೋ?
ದೇವರಲ್ಲಿ ಸುಳ್ಳು ಉಂಟೋ?
ದುಷ್ಟರಿಗೆ ಶಿಕ್ಷೆ ಬೇಡವೋ?

ನೀನು ಸಮುದ್ರದ ನೀರನ್ನು ಶೇರಿನಿಂದ ಅಳಿಯ ಬಹುದೋ?

ನೀನು ದೇವರ ಆಲೋಚನೆಗಳನ್ನು ನಿನ್ನ ಬುದ್ಧಿಯಿಂದ ಗ್ರಹಿಸ ಬಹುದೋ?

ಮುಳ್ಳು ಗಿಡಗಳು ದ್ರಾಕ್ಷೆಯ ಫಲಗಳನ್ನು ಫಲಿಸುವವೋ?

ಕೆಟ್ಟ ಮನಸ್ಸಿನಿಂದ ಉತ್ತಮ ಕ್ರಿಯೆಗಳು ಹುಟ್ಟುವವೋ?

ಸೂರ್ಯನು ಮೂಡಿದಾಗ ಕತ್ತಲೆ ಓಡಿ ಹೋಗುವದಿಲ್ಲವೋ?

ಜ್ಞಾನದ ಬೋಧನೆಯಿಂದ ಮನಸ್ಸಿಗೆ ಬೆಳಕಾಗುವದಿಲ್ಲವೋ?

ಕಾಲವಿಶೇಷಗಳು.

ಈಗ ನಾನು ಸಣ್ಣ ಹುಡುಗನಾಗಿರುತ್ತೇನೆ.

ಕೆಲವು ವರುಷಗಳ ಹಿಂದೆ ನಾನು ಕೂಸಾಗಿದ್ದೆನು.

ಮೂವತ್ತು ವರ್ಷಗಳ ಮೇಲೆ ನಾನು ಪ್ರಾಯಸ್ಥನಾಗಿರುವೆನು.

ಇಂದು ನೀನು ಸಾಲೆಯಲ್ಲಿರುತ್ತೀ.

ಒಂದು ತಿಂಗಳಿನ ಹಿಂದೆ ತಂದೇ ಮನೆಯಲ್ಲಿ ಆಡುತ್ತಾ ಇದ್ದಿ.

ಇನ್ನು ಮುಂದೆ ಒಳ್ಳೇ ಬುದ್ಧಿಗಳನ್ನು ಕಲಿಯುತ್ತಾ ಇರುವಿ.

ದೇವರು ಒಬ್ಬನೇ ಆದಿ ಅಂತ್ಯವಿಲ್ಲದವನಾಗಿರುತ್ತಾನೆ.

ಆತನು ಈ ಲೋಕವು ಉತ್ಪತ್ತಿಯಾಗುವ ಮೊದಲು ಇದ್ದನು.

ಆತನು ಸದಾಕಾಲವು ಇರುವನು.

ತಾಯಿಯು ಮನೇ ಕೆಲಸವನ್ನು ನೋಡುತ್ತಾ ಇರುತ್ತಾಳೆ.

ಅವಳು ಮೊನ್ನೆ ತನ್ನ ನೆಂಟರ ಬಳಿಗೆ ಹೋಗಿದ್ದಳು.

ನಮಗೆ ಬುದ್ಧಿ ಬಂದರೆ ಅವಳು ಸಂತೋಷದಿಂದ ಇರುವಳು.

ಭೂಲೋಕದಲ್ಲಿ ಎರಡು ಭಾಗ ನೀರು ಒಂದು ಭಾಗ ನೆಲ ಇರುತ್ತದೆ.

ಪೂರ್ವದಲ್ಲಿ ಎಲ್ಲಾ ಭೂಮಿಯ ಮೇಲೆ ನೀರು ಇತ್ತು.

ಕಡೆಯಲ್ಲಿ ಭೂಮಿ ಎಲ್ಲಾದರ ಮೇಲೆ ದೊಡ್ಡ ಬೆಂಕಿ ಇರುವದು.

ನಾವು ಈಗ ಸಾಲೆಯಲ್ಲಿ ಕಲಿಯುತ್ತಾ ಇರುತ್ತೇವೆ.
ನಿನ್ನೆ ಸಾಯಂಕಾಲದಲ್ಲಿ ಬೀದಿಯಲ್ಲಿ ಆಡುತ್ತಾ ಇದ್ದೆವು.
ನಾಳೆ ಪರೀಕ್ಷೆಗೋಸ್ಕರ ಧೊರೇ ಮನೆಗೆ ಹೋಗುತ್ತಾ ಇರುವೆವು.

ನೀವು ಈಗಲೇ ಸುಖದಿಂದಿರುತ್ತೀರಿ.
ಕೆಲವು ವರುಷಗಳ ಹಿಂದೆ ಸುಖ ದುಃಖ ತಿಳಿಯದೆ ಇದ್ದಿರಿ.
ಭಕ್ತಿಯಿಂದಿದ್ದರೆ ನಿತ್ಯವಾಗಿ ಸುಖದಿಂದ ಇರುವಿರಿ.

ಈಗಿನ ಕಾಲದಲ್ಲಿ ನೂರು ಕೋಟಿ ಮನುಷ್ಯರು ಭೂಮಿಯ ಮೇಲೆ ಇರುತ್ತಾರೆ.
ಆರಂಭದಲ್ಲಿ ಇಬ್ಬರು ಮಾತ್ರ ಇದ್ದರು.
ಕಡೇ ದಿನದಲ್ಲಿ ಎಲ್ಲಾ ಮನುಷ್ಯರು ಕೂಡಿ ಎಷ್ಟು ಮಂದಿ ಇರುವರು?


ಮನುಷ್ಯರೊಳಗೆ ಗುಣ ಗತಿಗಳ ಭೇದಗಳು ಇರುತ್ತವೆ.
ಭಕ್ತರೂ ಭಕ್ತಿಹೀನರೂ ಎಂಬ ಭೇದವು ಪೂರ್ವದಿಂದಲೇ ಇತ್ತು.
ಅವರ ಗುಣಗಳಿದ್ದ ಹಾಗೆ ಅವರ ಗತಿಗಳು ಇರುವವು.



ನಾನು ಅಕ್ಷರ ಬರೆಯುತ್ತೇನೆ.
ನೀನು ಪುಸ್ತಕ ಓದುತ್ತೀ.
ಒಕ್ಕಲಿಗನು ಗದ್ದೆ ಉಳುತ್ತಾನೆ.
ಅವಳು ಹತ್ತಿ ನೂಲುತ್ತಾಳೆ.
ಕೂಸು ನಿದ್ರೆ ಗೈಯುತ್ತದೆ.
ನಾವೆಲ್ಲರು ಅಯ್ಯನ ಮಾತು ಕೇಳುತ್ತೇವೆ.
ನೀವು ಧೊರೇ ಮನೆಗೆ ಹೋಗುತ್ತೀರಿ.
ಊರಿನವರು ಪೈರು ಕೊಯ್ಯುತ್ತಾರೆ.
ಬಡ ಹೆಂಗಸರು ಹಕ್ಕಲಾಯುತ್ತಾರೆ.
ಎತ್ತುಗಳು ಕಣ ತುಳಿಯುತ್ತವೆ.

ನಾನು ಮೊದಲು ಸಾಲೆಗೆ ಬಂದೆನು.
ನೀನು ಎಲ್ಲರಿಗೂ ಹಿಂದೆ ಬಂದಿ.
ನಿನ್ನೆ ಒಬ್ಬನು ಹೊಸದಾಗಿ ಶೇರಿದನು.
ತಾಯಿ ರೊಟ್ಟಿಯನ್ನು ಕೊಟ್ಟಳು.
ಮೊನ್ನೆ ದೊಡ್ಡ ಮಳೆ ಬಿತ್ತು.
ನಿನ್ನೆ ಒಳ್ಳೆ ಆಟ ಆಡಿದೆವು.
ನೀವು ತಿರುಗಾಡಲಿಕ್ಕೆ ಹೋದಿರಿ.
ಧೊರೆಗಳು ಪುಸ್ತಕ ಕೊಟ್ಟರು.
ಕಳ್ಳರು ರಾತ್ರಿಯಲ್ಲಿ ಕನ್ನ ಕೊರೆದರು.
ರಾತ್ರಿಯಲ್ಲಿ ನರಿಗಳು ಕೂಗಿದವು.

ನಾನು ನಿನಗೆ ಪುಸ್ತಕವನ್ನು ಕೊಟ್ಟೇನು.
ಅಭ್ಯಾಸ ಮಾಡಿದರೆ ಅದನ್ನು ಚನ್ನಾಗಿ ಗ್ರಹಿಸೀ.
ಚಿಕ್ಕ ಪ್ರಾಯದಲ್ಲಿ ಕಲಿತವನು ಬುದ್ಧಿವಂತನಾದಾನು.
ಅವಳು ಒಳ್ಳೆಯವಳು, ಧರ್ಮವನ್ನು ಕೊಟ್ಟಾಳು.
ಆ ಹಸು ಒಂದು ಶೇರು ಹಾಲನ್ನು ಕೊಟ್ಟೀತು.
ನಾವು ಓದಿದ್ದರಲ್ಲಿ ಪರೀಕ್ಷೆ ಕೊಟ್ಟೇವು.
ಪಾಪದ ಫಲವನ್ನು ಉಂಡೀರಿ.
ದುಷ್ಟರು ತಾವೇ ಅಗಿದ ಕುಣಿಯಲ್ಲಿ ಬಿದ್ದಾರು.
ಆ ಪಕ್ಷಿಗಳು ನಮ್ಮ ಶಬ್ದವನ್ನು ಕೇಳಿ ಹಾರಿ ಹೋದಾವು.



ಗಾದೆಗಳು.

ತಾಳಿದವ ಬಾಳ್ಯಾನು.
ಬೀಜದ ಹಾಗೆ ಫಲ ಶಿಕ್ಕುವದು.
ರೊಟ್ಟಿಗೆ ಬಂದ ನಾಯಿ ತುಪ್ಪಕ್ಕೆ ಬಂದೀತೇ?
ಹಂದಿಗೆ ಎಷ್ಟು ತೊಳೆದರೂ ಕೆಸರಿನಲ್ಲಿ ಬೀಳುವದು ಬಿಟ್ಟೀತೇ?
ಇಡೀ ಮುಳುಗಿದ ಮೇಲೆ ಛಳಿ ಉಂಟೇ?
ಹೊಸ ವೈದ್ಯನಿಗಿಂತ ಹಳೆ ರೋಗಿ ವಾಸಿ.
ಗಿಡವಾಗಿ ಬೊಗ್ಗದ್ದು ಮರವಾಗಿ ಬೊಗ್ಗೀತೇ?

ಹೊಳೇ ಪರಿಯಂತ್ರ ಓಟ, ಧೊರೇ ಪರಿಯಂತ್ರ ದೂರು.

ಕೆಟ್ಟ ಮೇಲೆ ಬುದ್ಧಿ ಬರೋದು, ಅಟ್ಟ ಮೇಲೆ ಒಲೆ ಉರೋದು.

ಕುಂಬಾರಗೆ ವರ್ಷ, ದೊಣ್ಣೆಗೆ ನಿಮಿಷ.

ತಾಗದೆ ಬಾಗದು, ಬಿಸಿಯಾಗದೆ ಬೆಣ್ಣೆ ಕರಗದು.

ಗೋವು ಕಪ್ಪಾದರೆ ಹಾಲು ಕಪ್ಪೇ?

ಬಾಯಾರಿದಾಗ ಭಾವಿ ತೋಡಿದ ಹಾಗೆ.

ಹಾವು ಮುಪ್ಪಾದರೆ ವಿಷ ಮುಪ್ಪೇ?

ಅಳಿದ ಊರಿಗೆ ಉಳಿದವನೇ ಗೌಡ.

ಗುರುವಿನಂತೆ ಶಿಷ್ಯ, ತಂದೆಯಂತೆ ಮಗ.

ಬೆಳಿಯುವ ಪೈರು ಮೊಳೆಯಲ್ಲೇ ಕಾಣುವದು.

ಚಿಂತೆಯೇ ಮುಪ್ಪು, ಸಂತೋಷವೇ ಯೌವನ.

ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

ಸಹಸ್ರ ಚಿತ್ರಾರವನ್ನು ಒಂದು ಮಶಿ ನುಂಗೀತು.

ಕಡ ಹುಟ್ಟಿ ಬಡವ ಕೆಟ್ಟ.

ಹೋದರೆ ಒಂದು ಕಲ್ಲು, ಬಂದರೆ ಒಂದು ಹಣ್ಣು.

ಕೋಣಾ ಬೆಳದರೆ, ಆನೆಯಾದೀತೇ?

ಸಮಯಕ್ಕೆ ಒದಗಿದವನೇ ನೆಂಟ, ಕೆಲಸಕ್ಕೆ ಒದಗಿದವನೇ ಬಂಟ.

ಬತ್ತಿ ನೂಕಲಾರದ ಬಂಟ ದಳ ನಡಿಸ್ಯಾನೇ?

ಕಥೆಗಳು.

೧. ಎಲ್ಲ ಜನರಿಗೆ ಮೆಚ್ಚಿಸ ಕೂಡದು.

ಒಂದು ಗ್ರಾಮದಲ್ಲಿರುವ ಪರತಂತ್ರಬುದ್ಧಿಯುಳ್ಳ ಒಬ್ಬ ಒಕ್ಕಲಿಗನು ತನ್ನಲ್ಲಿರುವ ಒಂದು ಕುದುರೇ ತಟ್ಟನ್ನು ಮಾರುವದಕ್ಕೆ ಸಮೀಪವಾದ ಪಟ್ಟಣದ ಪೇಟೆಗೆ ಹೋಗಬೇಕೆಂದು ಬೆಳಿಗ್ಯೆ ಮಗನಿಗೆ ಕರೆದು, ಆ ತಟ್ಟುವಿಗೆ ಕಡಿವಾಣ ಕಟ್ಟಿ, ಸಿದ್ಧ ಮಾಡಿಸಿ, ಅದರ ಮೇಲೆ ತಾನು ಕೂತುಕೊಂಡು, ಹುಡುಗನಾದ ಮಗನಿಗೆ, ಹಿಂದೆ ಹೊಡದು ಕೊಂಡು ಬಾ ಎಂದು ಹೇಳಿ, ಹೊರಟನು. ಸ್ವಲ್ಪ ದೂರ ಹೋದಾಗ, ಎದುರಾಗಿ ಬರುವ ಒಬ್ಬನು ಇವನನ್ನು ನೋಡಿ—ಎಲೇ ಒಕ್ಕಲಿಗನೇ, ನೀ ಏನು ಮಾಡಿದಿ? ಎಳೇ ಪ್ರಾಯದ ಮಗನನ್ನು ಇಂಥಾ ಕರಕಲಾದ ಮಾರ್ಗದಲ್ಲಿ ನಡಿಸಿ, ತ್ರಾಣವಂತನಾದ ನೀನು ತಟ್ಟಿನ ಮೇಲೆ ಏರಿದ್ಯಾ? ಮಗನ ಮೇಲೆ ಕರುಣವಿಲ್ಲವೋ? ಎಂದನು. ಈ ಒಕ್ಕಲಿಗನು ಆ ಮಾತು ಸರಿ ಎಂದು ತಿಳುಕೊಂಡು, ತಾನು ಕೆಳಗೆ ಇಳಿದು, ಮಗನನ್ನು ಏರಿಸಿ, ಹಿಂದೆ ನಡೆದು ಹೋದನು. ಸ್ವಲ್ಪ ದೂರ ಹೋದಾಗ್ಯೆ, ಅಲ್ಲಿರುವ ಒಬ್ಬನು ಇವರನ್ನು ನೋಡಿ—ಎಲೇ ದಡ್ಡನೇ, ಮುದುಕನಾದ ತಂದೆಯನ್ನು ಕಾಲುಹಾದಿ ನಡಿಸಿ, ತ್ರಾಣವುಳ್ಳ ನೀನು ತಟ್ಟಿನ ಮೇಲೆ ಕೂತುಕೊಳ್ಳುವದು ಸಮವೋ? ಎಂದನು. ಆ ಒಕ್ಕಲಿಗನು ಈ ಮಾತು ಕೇಳಿ, ಒಹೋ ನಾನು ನಡದರೂ ಸಮವಲ್ಲ, ಹುಡುಗ ನಡದರೂ ಸಮವಲ್ಲ,

ಇಬ್ಬರೂ ಕೂತುಕೊಳ್ಳುವ ಎಂದು ಹೇಳಿ, ಇಬ್ಬರೂ ಕುಳಿತರು. ಹೀಗೆ ಸ್ವಲ್ಪ ದೂರ ನಡೆದ ಮೇಲೆ ಮಾರ್ಗಸ್ಥರಾದ ಕೆಲವರು ಮಧ್ಯ ಮಾರ್ಗದಲ್ಲಿ ಇವರಿಗೆದುರಾಗಿ ನಿಂತು—ಎಲೇ ನಿಷ್ಕರುಣಿಯಾದ ವೃದ್ಧನೇ, ಈ ಚಿಕ್ಕ ತಟ್ಟುವನ್ನು ಹೀಗೆ ದಣಿಸುವದು ಸಮವೋ? ಡೊಳ್ಳಾದ ನೀನು ಈ ಸಣ್ಣ ತಟ್ಟಿನ ಮೇಲೆ ಕೂತುಕೊಂಡು, ನಿನ್ನ ಭಾರ ಸಾಲದೆಂದು ದಡ್ಡನಾದ ನಿನ್ನ ಮಗನನ್ನು ಸಹ ಏರಿಸುವದು ಪಾಪವಲ್ಲವೋ? ಎಂದರು. ಅದಕ್ಕೆ ಆ ಒಕ್ಕಲಿಗನು, ಒಹೋ ಇದೂ ಆಗಲಿಲ್ಲವೆಂದು ನೆಟ್ಟುಸುರಿನಿಂದ ಕೆಳಗಿಳಿದು, ಮಗನನ್ನೂ ಇಳಿಸಿ, ಆ ತಟ್ಟನ್ನು ಮುಂದೆ ಹೊಡದು, ಅದರ ಹಿಂದೆ ಮಗನ ಕೈ ಹಿಡಿದು ನಡೆದನು. ಇನ್ನು ಮುಂದೆ ಹೋದಾಗ ಒಬ್ಬನು ನೋಡಿ, ಹಾಹಾ ಎಂದು ನಕ್ಕು—ಈ ತಟ್ಟು ಬಹಳ ಪುಣ್ಯವುಳ್ಳದ್ದು, ಇದರ ಮೇಲೆ ಏರುವವನು ಯಾವನೂ ಇಲ್ಲ, ಹಿಂದೆ ಬಾಲ ಹಿಡಿದು ಸೇವಕರಂತೆ ಇಬ್ಬರು ನಡೆಯುತ್ತಾರೆ, ಎಂದನು. ಆ ಮಾತು ಇವನು ಕೇಳಿ, ಬಹಳ ವ್ಯಸನ ಪಟ್ಟು, ಹ್ಯಾಗೂ ಸಮವಲ್ಲ, ನಾನು ಕೂತರೂ ಹುಡುಗ ಕೂತರೂ ಇಬ್ಬರೂ ಕೂತರೂ ಇಬ್ಬರೂ ನಡೆದರೂ ಏನೂ ಸಮವಾಗಲಿಲ್ಲವೆಂದು, ಕುದುರೇ ಕಾಲುಗಳನ್ನು ಕಟ್ಟಿ, ಒಂದು ಬಿದುರ ತುಂಡು ತಂದು, ಅದರ ಕಾಲುಗಳ ಮಧ್ಯದಲ್ಲಿ ಶೇರಿಸಿ, ಇದನ್ನು ಇಬ್ಬರೂ ಹೊತ್ತುಕೊಂಡು ಹೋದರು. ಅಷ್ಟರೊಳಗೆ ಪಟ್ಟಣದ ಸಮೀಪಕ್ಕೆ ಬಂದು, ಅಗಳತೆಯ

ಸಂಕ ದಾಟುವಾಗ್ಯೆ ಹೆಬ್ಬಾಗಲಿನಿಂದ ಬರುವ ಜನರು— ಇಲ್ಲಿ ಇಬ್ಬರು ಹುಚ್ಚರು ಕುಂಡ್ರುವ ತಟ್ಟು ಕಟ್ಟಿ ಹೊತ್ತು ಕೊಂಡು ಬಂದಿದ್ದಾರೆಂದು ಕೂಗಿ, ಗದ್ದಲ ಮಾಡಿದರು. ಆ ಮಾತು ಕೇಳಿ, ಒಕ್ಕಲಿಗನು ಕಂಗಾಲಾಗಿ, ಮುಂದಗಡೆ ಹೊತ್ತುಕೊಂಡ ಹುಡುಗನಿಗೆ ಕರೆದು—ಮಗನೇ, ಈ ದುಷ್ಟ ಮೃಗ ನಾಶವಾಗಲಿ; ಇದರಿಂದ ನಾವು ಅಪಹಾಸ್ಯಕ್ಕೆ ಗುರಿಯಾದೆವು ಎಂದು, ರೋಷ ಉಳ್ಳವನಾಗಿ ಆ ತಟ್ಟನ್ನು ಮುಳುಗಿಸಿದನು. ಹೀಗೆ ಅವರು ತಟ್ಟೂ ಇಲ್ಲದೆ ಹಣವೂ ಇಲ್ಲದೆ ಮನೆಗೆ ತಿರಿಗಿ ಬಂದರು.

---

೨. ಮುಯ್ಯಿಗೆ ಮುಯ್ಯಿ ಮಾಡ ಬಾರದು.

ಮುಸಲಮಾನರ ರಾಜ್ಯದಲ್ಲಿ ಒಬ್ಬ ಐಶ್ವರ್ಯವಂತನಾದ ತುರುಕನು ಇದ್ದನು. ಅವನು ಒಂದು ದಿವಸ ತನ್ನ ಬಳಿಗೆ ಬೇಡ ಬಂದ ದರಿದ್ರನಿಗೆ ಭಿಕ್ಷವನ್ನು ಕೊಡದೆ, ಅವನನ್ನು ಬೈದು ಹೊರಗೆ ದೊಬ್ಬಿ ಕಲ್ಲೆಸೆದನು. ಆ ದರಿದ್ರನು ಆ ಕಲ್ಲನ್ನು ತೆಗದು, ತನ್ನ ಚೀಲದಲ್ಲಿಟ್ಟು ಕೊಂಡು, ಆ ಭಾಗ್ಯವಂತನಿಗೆ ಅದೇ ಕಲ್ಲನ್ನು ಎಸೆಯಬೇಕೆಂಬ ಆಲೋಚನೆಯಲ್ಲಿ ಎರಡು ವರ್ಷ ಪರಿಯಂತ್ರ ಸಮಯವನ್ನು ಹುಡುಕುತ್ತಿರಲು, ಒಂದು ದಿವಸ ಆ ಭಾಗ್ಯವಂತನು ತನ್ನಿಂದ ಮಾಡಲ್ಪಟ್ಟ ಅಪರಾಧಕ್ಕೋಸ್ಕರ ಕತ್ತೇ ಮೇಲೆ ಕೂತು, ಪೇಟೇ ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದನು. ಆ ಸಮಯದಲ್ಲಿ ದರಿದ್ರನು ಅವನಿಗೆ

ಏಸೆಯುವದಕ್ಕೆ ತನ್ನ ಚೀಲದಲ್ಲಿದ್ದ ಕಲ್ಲನ್ನು ತೆಗೆಯುವಾಗ, "ತಮ್ಮ ಶಿಟ್ಟನ್ನು ಶಾಂತ ಪಡಿಸಿ, ವಿರೋಧಿಗಳಿಗೆ ಮನ್ನಿಸಿ, ಶತ್ರುಗಳಿಗೆ ಉಪಕಾರ ಮಾಡುವವರಿಗೆ ಮುಕ್ತಿಯು ಉಂಟಾಗುವದು" ಎಂಬ ವಚನವು ಅವನ ನೆನಪಿಗೆ ಬಂತು. ಆ ಕ್ಷಣದಲ್ಲಿ ಅವನು ಕಲ್ಲನ್ನು ಬಿಸಾಟು, ಮನೆಗೆ ಹೋದನು. ಅದೇ ಪ್ರಕಾರ ಯೇಸು ಕ್ರಿಸ್ತನು ಹೇಳುವದೇನಂದರೆ: "ನಿಮ್ಮ ಶತ್ರುಗಳನ್ನು ಸ್ನೇಹಿಸಿರಿ. ನಿಮಗೆ ಅನ್ಯಾಯ ಮಾಡುವವರಿಗೋಸ್ಕರ ಬೇಡಿಕೊಳ್ಳಿರಿ. ನಿಮ್ಮನ್ನು ಹೇಸುವವರಿಗೆ ಉಪಕಾರ ಮಾಡಿರಿ. ನೀವು ಕೋಪಿಸುವ ಕಾಲದಲ್ಲಿ ಸೂರ್ಯನು ಅಸ್ತಮಾನವಾಗದಿರಲಿ."

---

೩. ಮಕ್ಕಳನ್ನು ತಾಯಿ ನೋಡದೆ ಇದ್ದಾಗ್ಯೂ ದೇವರು ನೋಡುತ್ತಾನೆ.

ಒಂದು ಊರಿನಲ್ಲಿ ಒಬ್ಬ ದರಿದ್ರಳು ಮಂದೆಯನ್ನು ಕಾಯುತ್ತಿದ್ದಳು. ಅವಳಿಗೆ ಒಂದು ಕೂಸು ಇತ್ತು. ಅವಳು ಒಂದು ದಿವಸ ಅಡವಿಯಲ್ಲಿ ಮಂದೆಯನ್ನು ಕಾಯುತ್ತಲೂ ಕಂಚಿನ ಪಾತ್ರೆಯಲ್ಲಿರುವ ಗಂಜಿಯನ್ನು ಮರದ ಸವುಟಿನಲ್ಲಿ ತೆಗದು, ತನ್ನ ಕೂಸಿಗೆ ಕುಡಿಸುತ್ತಲೂ ಇರುವ ಸಮಯದಲ್ಲಿ ದನಗಳಲ್ಲಿ ಕೆಲವು ಮೇವಿಗೂ ನೆರಳಿಗೂ ಸ್ವಲ್ಪ ದೂರ ಹೋದದ್ದನ್ನು ನೋಡಿ, ಅಡವಿಯ ತೋಳಗಳು ಅವುಗಳನ್ನು ಕಚ್ಚಿ ಬಿಟ್ಟಾವೆಂಬ ಭಯ

ದಿಂದ ಆ ಸವುಟನ್ನೂ ಗಂಜಿಯ ಪಾತ್ರೆಯನ್ನೂ ಕೂಸಿಗೆ
ಉಣ್ಣಲಿಕ್ಕೆ ಕೊಟ್ಟು, ದನಗಳ ಬಳಿಗೆ ಹೋದಳು. ಇತ್ತ
ಲು ಗಂಜಿ ಕುಡಿಯುವದಕ್ಕೆ ಸವುಟನ್ನು ಕೈಯಲ್ಲಿ ಹಿಡಿ
ದಿರುವ ಕೂಸನ್ನು ಒಂದು ತೋಳವು ಹಿಡಿದುಕೊಂಡು
ಹೋಯಿತು. ಸ್ವಲ್ಪ ಹೊತ್ತಿನ ಮೇಲೆ ತಾಯಿಯು ಬಂ
ದು, ಕೂಸನ್ನೂ ಸವುಟನ್ನೂ ಕಾಣದೆ ಕವಚಿ ಬಿದ್ದ ಕಂ
ಚಿನ ಪಾತ್ರೆಯನ್ನು ಮಾತ್ರ ನೋಡಿ, ತನ್ನ ಕೂಸನ್ನು
ತೋಳ ತೆಗದುಕೊಂಡು ಹೋಯಿತೆಂದು ನಿಶ್ಚೈಸಿ, ಜನ
ರನ್ನು ಕೂಗುವದಕ್ಕೆ ಊರಿಗೆ ಹೋದಳು. ಆ ಸಮಯ
ದಲ್ಲಿ ಒಬ್ಬ ಮಾರ್ಗಸ್ಥನು ದಾರಿ ತಪ್ಪಿ, ಆ ಅಡವಿಯಲ್ಲಿ
ತೊಳಲುತ್ತಾ ಇರುವಾಗ—ಮುಟ್ಟಿದರೆ ಹೊಡೆಯುತ್ತೇ
ನೆ, ಮುಟ್ಟಿದರೆ ಹೊಡೆಯುತ್ತೇನೆ ಎಂಬ ಶಬ್ದವನ್ನು ಕೇಳಿ,
ಆಶ್ಚರ್ಯಪಟ್ಟು, ಮುಂದೆ ಹೋಗಿ, ತನ್ನ ಸುತ್ತಲೂ ನಿಂ
ತು ಕಚ್ಚಲಿಕ್ಕೆ ಬರುವ ೬ ತೋಳದ ಮರಿಗಳನ್ನು ತನ್ನ ಕೈ
ಯಲ್ಲಿ ಹಿಡಿದಿರುವ ಸವುಟಿನಿಂದ ಬೆದರಿಸುತ್ತಾ ಇರುವ
ಕೂಸನ್ನು ಕಂಡು, ತೋಳದ ಮರಿಗಳನ್ನು ಓಡಿಸಿ, ಅವುಗ
ಳ ತಾಯಿ ಬಂದೀತೆಂಬ ಭಯದಿಂದ ಆ ಕೂಸನ್ನು ತ್ವರಿತ
ವಾಗಿ ಎತ್ತಿಕೊಂಡು ಬಂದು, ಅದರ ತಾಯಿಗೆ ಕೊಟ್ಟನು.
ಅವಳು ಬಹಳ ಸಂತೋಷಪಟ್ಟು, ತನ್ನ ಕೂಸಿನ ಜೀವ
ವನ್ನು ಉಳಿಸಿದೆ ಎಂದು, ಅವನನ್ನು ಬಹಳ ಉಪಚರಿಸಿ,
ತನ್ನ ಕೂಸಿನ ಪ್ರಾಣವನ್ನು ಆಶ್ಚರ್ಯ ರೀತಿಯಿಂದ ತ
ಪ್ಪಿಸಿದ ದೇವರಿಗೆ ಸ್ತುತಿ ಮಾಡಿದಳು. ಊರಿನಿಂದ ಜನ

ರು ದೊಣ್ಣೆಗಳನ್ನು ತೆಗದುಕೊಂಡು ಬಂದು, ತೋಳ ವನ್ನು ಹೊಡೆದು ಕೊಂದುಹಾಕಿದರು.



೪. ಯೇಸುವು ಮಕ್ಕಳಿಗೆ ಪ್ರೀತಿ ಮಾಡುತ್ತಾನೆ.

ಹುಡುಗರೇ, ಬರ್‍ರಿ, ನನ್ನನ್ನು ಆಲೈಸಿರಿ. ಯೇಸುವಿನ ಪ್ರೀತಿಯನ್ನು ನಿಮಗೆ ವಿವರಿಸುತ್ತೇನೆ. ಆತನು ಒಂದು ವೇಳೆ ದಿವಸದ ಕಷ್ಟವನ್ನು ತೀರಿಸಿ, ವಿಶ್ರಾಂತನಾದ ಮೇಲೆ ತಾಯಿಗಳು ಬಂದು, ತಮ್ಮ ಕೂಸುಗಳನ್ನು ಯೇಸುವಿನ ಹತ್ತರ ತಂದು, ಆತನು ತನ್ನ ಕೈಗಳನ್ನು ಮೇಲೆ ಇರಿಸ ಬೇಕೆಂದು ಬಿನ್ನೈಸಲಾಗಿ, ಶಿಷ್ಯರು ತಂದವರಿಗೆ ಹೆದರಿಸಿದರು. ಯೇಸು ಅದನ್ನು ನೋಡಿ, ಕೋಪಿಸಿ, ಕೂಸುಗಳನ್ನು ಅಡ್ಡಿ ಮಾಡದೆ ನನ್ನ ಹತ್ತರ ಬರಗೊಡಿಸಿರಿ; ಯಾತಕ್ಕಂದರೆ ದೇವರ ರಾಜ್ಯವು ಇಂಥವರದಾಗಿದೆ. ನಿಶ್ಚಯವಾಗಿ ದೇವರ ರಾಜ್ಯವನ್ನು ಕೂಸಿನಂತೆ

ಹೊಂದದವನು ಅದರಲ್ಲಿ ಪ್ರವೇಶಿಸನು ಎಂದು ಹೇಳಿದನು. ಆಗಲಾತನು ಅವರನ್ನು ತಬ್ಬಿಕೊಂಡು, ಕೈಗಳನ್ನು ಇರಿಸಿ, ಆಶೀರ್ವದಿಸಿದನು.



ಸಾಮ್ಯಗಳು.

೧. ಮರಗಳ ಅರಸನು.

ಮರಗಳು ತಮಗೆ ಅರಸನನ್ನು ಅಭಿಷೇಕಿಸ ಹೋಗಲಾಗಿ, ಇಪ್ಪೇ ಮರಕ್ಕೆ—ನಮಗೆ ಅರಸನಾಗು ಎಂದವು. ಇಪ್ಪೇ ಮರವು—ದೇವಮನುಷ್ಯರು ನನ್ನಲ್ಲಿ ಹೊಗಳುವ ನನ್ನ ಜಿಡ್ಡನ್ನು ಬಿಟ್ಟು, ಮರಗಳ ಮೇಲೆ ತೂಗ್ಯಾಡಲಿಕ್ಕೆ ಹೋಗಲೋ? ಎಂದು ಅವುಗಳಿಗೆ ಹೇಳಿತು. ಆಗಲು ಮರಗಳು ಅಂಜೂರಕ್ಕೆ—ನೀನು ಬಂದು, ನಮ್ಮ ಮೇಲೆ ಅರಸನಾಗು ಎಂದವು. ಅಂಜೂರವು ಅವುಗಳಿಗೆ—ನಾನು ನನ್ನ ಮಾಧುರ್ಯವನ್ನೂ ಒಳ್ಳೇ ಬೆಳೆಯನ್ನೂ ಬಿಟ್ಟು, ಮರಗಳ ಮೇಲೆ ತೂಗ್ಯಾಡಲಿಕ್ಕೆ ಹೋಗಲೋ? ಎಂದು ಹೇಳಿತು. ಆಗಲು ಮರಗಳು ದ್ರಾಕ್ಷೆಗೆ—ನೀನು ಬಂದು, ನಮ್ಮ ಮೇ

ಲೆ ಅರಸನಾಗು ಎಂದವು. ದ್ರಾಕ್ಷೆಯು ಅವುಗಳಿಗೆ—ನಾನು ದೇವಮನುಷ್ಯರಿಗೆ ಆನಂದ ಪಡಿಸುವ ನನ್ನ ರಸವನ್ನು ಬಿಟ್ಟು, ಮರಗಳ ಮೇಲೆ ತೂಗ್ಯಾಡಲಿಕ್ಕೆ ಹೋಗಲೋ? ಎಂದು ಹೇಳಿತು. ಆಗಲು ಮರಗಳೆಲ್ಲಾ ಮುಳ್ಳುಗಿಡಕ್ಕೆ—ನೀನು ಬಂದು, ನಮ್ಮ ಮೇಲೆ ಅರಸನಾಗು ಎಂದವು. ಮುಳ್ಳುಗಿಡವು ಮರಗಳಿಗೆ—ನೀವು ನಿಶ್ಚಯವಾಗಿ ನನ್ನನ್ನು ನಿಮ್ಮ ಮೇಲೆ ಅರಸಾಗಲಭಿಷೇಕಿಸಿದರೆ, ಬಂದು ನನ್ನ ನೆರಳಿನಲ್ಲಿ ಆಶ್ರಯವಾಗಿರಿ; ಇಲ್ಲದಿದ್ದರೆ, ಮುಳ್ಳುಗಿಡದಿಂದ ಬೆಂಕಿಯು ಹೊರಟು, ಲೆಬನೋನಿನ ದೇವದಾರುಗಳನ್ನು ತಿಂದು ಬಿಡಲಿ ಎಂದು ಹೇಳಿತು.

---

೨. ಇರುವೆಯು.

ಮೈಗಳ್ಳನೇ, ಇರುವೆಯ ಹತ್ತರ ಹೋಗಿ, ಅದರ ನಡತೆಯನ್ನು ನೋಡಿ, ಬುದ್ಧಿ ತಂದುಕೋ. ಇರುವೆಗೆ ನ್ಯಾಯಾಧಿಪತಿಯೂ ವಿಚಾರಕನೂ ಅಧಿಕಾರಿಯೂ ಇಲ್ಲದೆ ಬೇಸಿಗೆಗಾಲದಲ್ಲಿ ಅದರ ರೊಟ್ಟಿಯನ್ನು ಇಟ್ಟುಕೊಂಡು, ಸುಗ್ಗಿಯಲ್ಲಿ ಅದರ ಆಹಾರವನ್ನು ಕೂಡಿಸುತ್ತದೆ. ಮೈಗಳ್ಳನೇ, ಎಷ್ಟು ಮಟ್ಟಿಗೆ ನಿದ್ರೆಗೈಯುವಿ? ಯಾವಾಗ ನಿದ್ರೆಯಿಂದ ಏಳುವಿ? ಸ್ವಲ್ಪ ನಿದ್ರೆ, ಸ್ವಲ್ಪ ತೂಗಡಿಕೆ. ಕೈಗಳನ್ನು ಕೂಡಿಸಿ, ಸ್ವಲ್ಪ ಮಲಗಲಿ ಎನ್ನಲು, ನಿನ್ನ ಬಡತನವು ಪ್ರಯಾಣಸ್ಥನ ಹಾಗೆಯೂ ನಿನ್ನ ದರಿದ್ರವು ಯುದ್ಧಸ್ಥನ ಹಾಗೆಯೂ ಬರುವವು.

---

೩. ಬುದ್ಧಿಯುಳ್ಳ ಪ್ರಾಣಿಗಳು.

ನಾಲ್ಕು ಪ್ರಾಣಿಗಳು ಭೂಮಿಯಲ್ಲಿ ಸಣ್ಣವುಗಳಾದಾಗ್ಯೂ ವಿಶೇಷವಾದ ಬುದ್ಧಿಯಿಂದ ತುಂಬಿದವುಗಳಾಗಿವೆ. ಇರುವೆಗಳು ತ್ರಾಣಹೀನ ಜೀವಿಯಾಗಿದ್ದಾಗ್ಯೂ ಬೇಸಿಗೆಯಲ್ಲಿ ತಮ್ಮ ರೊಟ್ಟಿಯನ್ನು ಇಟ್ಟುಕೊಳ್ಳುತ್ತವೆ. ಮೊಲಗಳು ಬಲಹೀನ ಜೀವಿಗಳಾದಾಗ್ಯೂ ಬಂಡೆಯಲ್ಲಿ ತಮ್ಮ ಮನೆಗಳನ್ನು ಮಾಡುತ್ತವೆ. ಮಿಡಿತೆಗಳಿಗೆ ಅರಸನು ಇಲ್ಲ; ಆದಾಗ್ಯೂ ಅವು ದಂಡಾಗಿ ಹೊರಡುತ್ತವೆ. ಜಾಡವು ಕೈಗಳಿಂದ ಕೆಲಸ ಮಾಡಿ, ಅರಮನೆಗಳಲ್ಲಿಯೂ ಇರುತ್ತದೆ.



೪. ದ್ರಾಕ್ಷೇ ತೋಟವು.

ಸುಭೂಮಿಯಾದ ಗುಡ್ಡದಲ್ಲಿ ನನ್ನ ಇಷ್ಟನಿಗೆ ದ್ರಾಕ್ಷೇ ತೋಟವಿತ್ತು. ಅವನು ಅದಕ್ಕೆ ಬೇಲಿ ಹಾಕಿ ಕಲ್ಲುಗಳ

ನ್ನು ಹೊರಗೆ ಮಾಡಿ, ಒಳ್ಳೇ ದ್ರಾಕ್ಷೆಯ ಬಳ್ಳಿಗಳನ್ನು ನೆಟ್ಟು, ಅದರ ಮಧ್ಯದಲ್ಲಿ ಗೋಪುರವನ್ನು ಕಟ್ಟಿ, ಗಾಣವನ್ನು ಸಹ ಮಾಡಿದನು. ಅದು ದ್ರಾಕ್ಷೇ ಹಣ್ಣುಗಳನ್ನು ಫಲಿಸುವದೆಂದು ಯಜಮಾನನು ನಿಶ್ಚೈಸಿದಾಗ್ಯೂ, ಅದು ಕಾಡ ಕಾಯಿಗಳನ್ನು ಫಲಿಸಿತು. ಹೀಗಿರುವದರಿಂದ ಯೆರೂಸಲೇಮಿನ ನಿವಾಸಿಗಳೇ, ಯೆಹೂದದ ಜನರೇ, ನನಗೂ ನನ್ನ ದ್ರಾಕ್ಷೆಯ ತೋಟಕ್ಕೂ ನ್ಯಾಯ ತೀರಿಸಿರಿ. ನಾನು ಮಾಡಿದ್ದನ್ನು ಹೊರ್ತು ಇನ್ನೇನು ನನ್ನ ದ್ರಾಕ್ಷೇ ತೋಟಕ್ಕೆ ಮಾಡ ಬಹುದಿತ್ತು? ಹ್ಯಾಗಾದರೂ ಅದು ಹಣ್ಣುಗಳನ್ನು ತರುವದೆಂದು ನಾನು ನಿಶ್ಚೈಸಿದಾಗ, ಅದು ಯಾಕೆ ಕಾಡ ಕಾಯಿಗಳನ್ನು ತಂತು? ಆದ ಕಾರಣ ನನ್ನ ದ್ರಾಕ್ಷೇ ತೋಟಕ್ಕೆ ಮಾಡುವದನ್ನು ನಿಮಗೆ ತಿಳಿಸುತ್ತೇನೆ. ನಾನು ಬೇಲಿಯನ್ನು ತೆಗದು ಹಾಕುತ್ತೇನೆ, ಆಗ ತೋಟವು ಹಾಳಾಗುವದು; ಗೋಡೆಯನ್ನು ಕೆಡವುತ್ತೇನೆ, ಆಗಲದು ತುಳಿಯಲ್ಪಡುವದು; ನಾನು ಅದನ್ನು ಕಾಡಾಗ ಮಾಡುತ್ತೇನೆ, ಆಗಲದು ಕತ್ತರಿಸಲ್ಪಡುವದು, ಅಗಿಯಲ್ಪಡುವದು, ಮತ್ತು ಮುಳ್ಳು ದತ್ತೂರಿಗಳು ಎದ್ದು ಬರುವವು; ಆ ಮೇಲೆ ಮಳೆ ಸುರಿಸದ ಹಾಗೆ ಮೋಡಗಳಿಗೆ ಆಜ್ಞಾಪಿಸುವೆನು.



೫. ಸತ್ತವರ ಎಲುವುಗಳು.

ಕರ್ತನ ಕೈ ನನ್ನ ಮೇಲೆ ಇತ್ತು. ಕರ್ತನು ತನ್ನ ಆತ್ಮದೊಡನೆ ನನ್ನನ್ನು ಹೊರಗೆ ತಂದು, ಬೈಲಿನ ಮಧ್ಯದಲ್ಲಿ ನೈದನು. ಆ ಬೈಲು ಎಲುವುಗಳಿಂದ ತುಂಬಿ ಇತ್ತು. ಆತನು ನನ್ನನ್ನು ಅವುಗಳ ಸುತ್ತಲಾಗಿ ದಾಟ ಮಾಡಿದನು. ಅವು ಆ ಬೈಲಿನಲ್ಲಿ ಅತಿ ಹೆಚ್ಚೂ ಬಹಳ ಒಣಗಿದವುಗಳೂ ಆಗಿದ್ದವು. ಆಗಲಾತನು ನನಗೆ—ಮನುಷ್ಯನ ಮಗನೇ, ಆ ಎಲುವುಗಳು ಜೀವವಾದಾವೋ? ಎಂದಾಗ—ಕರ್ತನಾದ ದೇವರೇ, ನೀನೇ ಬಲ್ಲಿ, ಅಂದೆನು. ಆಗಲಾತನು ನನಗೆ—ನೀನು ಆ ಎಲುವುಗಳ ಮೇಲೆ ಪ್ರವಾದನೆ ನುಡಿದು, ಒಣಗಿದ ಎಲುವುಗಳೇ, ಕರ್ತನ ವಾಕ್ಯವನ್ನು ಕೇಳಿರಿ ಎಂದು ಅವುಗಳಿಗೆ ಹೇಳು, ಎಂದನು. ಕರ್ತನಾದ ದೇವರು ಆ ಎಲುವುಗಳಿಗೆ ಹೇಳುವದೇನಂದರೆ—ಇಗೋ, ನಾನು ನಿಮ್ಮೊಳಗೆ ಆತ್ಮವನ್ನು ಕಳುಹಿಸುತ್ತೇನೆ. ನೀವು ಬದುಕುವಿರಿ. ನಾನೇ ಕರ್ತನೆಂದು ನೀವು ತಿಳಿಯುವಿರಿ. ಅಪ್ಪಣೆಯಾದ ಪ್ರಕಾರ ನಾನು ಪ್ರವಾದನೆ ನುಡಿದೆನು. ನುಡಿಯುವಾಗಲೇ ಶಬ್ದವಾಯಿತು. ಅಗೋ, ಅಲ್ಲಾಟವು. ಆ ಎಲುವುಗಳು ಒಂದಕ್ಕೊಂದು ಕೂಡಿದವು. ನಾನು ನೋಡಲಾಗಿ, ಅಗೋ, ಅವುಗಳ ಮೇಲೆ ನರಗಳೂ ಮಾಂಸಗಳೂ ಎದ್ದವು. ಅವುಗಳ ಮೇಲೆ ಚರ್ಮ ಮುಚ್ಚಿತು. ಇನ್ನೂ ಅವುಗಳಲ್ಲಿ ಆತ್ಮವು ಇರಲಿಲ್ಲ. ಆಗಲಾತನು ನನಗೆ

ಹೇಳಿದ್ದು—ನೀನು ವಾಯುವಿಗೆ ಪ್ರವಾದನೆ ನುಡಿ, ಮನುಷ್ಯನ ಮಗನೇ, ನೀನು ವಾಯುವಿಗೆ ಪ್ರವಾದನೆ ನುಡಿದು, ಹೇಳ ತಕ್ಕದ್ದೇನಂದರೆ—ಘಾಳಿಯೇ, ನೀನು ಚತುರ್ದಿಕ್ಕಿನಿಂದ ಬಂದು, ಆ ಸತ್ತವರ ಮೇಲೆ ಅವರು ಜೀವವಾಗುವ ಹಾಗೆ ಬೀಸು ಎಂದು ಕರ್ತನಾದ ದೇವರು ಹೇಳುತ್ತಾನೆ, ಎಂದನು. ಆತನು ನನಗೆ ಆಜ್ಞಾಪಿಸಿದ ಪ್ರಕಾರ ನಾನು ಪ್ರವಾದನೆ ನುಡಿಯಲು, ಪ್ರಾಣವು ಅವರೊಳಗೆ ಬಂತು. ಅವರು ಜೀವವಾಗಿ, ಎದ್ದು, ನಿಂತು, ಮಹಾ ದೊಡ್ಡ ಸೈನ್ಯವಾಗಿದ್ದರು.

---

೬. ಬುದ್ಧಿಯು.

